# ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು
# ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ, ಕಲಬುರಗಿ

# ಸೇವಾವಾಣಿ

## ಜೂನ್ 2024








**June 2024**

## “ಆರ್ಬಿಟ್ ಸಂಸ್ಥೆಯಲ್ಲಿ ಮಾನಸಿಕ ಅಸ್ವಸ್ಥರಿಗೆ ಹಾಗೂ ಪೋಷಕರಿಗೆ ವಸತಿ ಸಹಿತ 16, 17 ಎರಡು ದಿವಸದ ತರಬೇತಿ ಕಾರ್ಯಗಾರ”

ಹುಮ್ನಾಬಾದ್ ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಮಾನಸಿಕ ಅಸ್ವಸ್ಥರಿಗೆ ಹಾಗೂ ಅವರ ಪೋಷಕರಿಗೆ ಎರಡು ದಿವಸದ ಮಾನಸಿಕ ಅಸ್ವಸ್ಥತೆಯ ಕುರಿತ ವಸತಿ ಸಹಿತ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಮೊದಲಿಗೆ ಅತಿಥಿ ಗಣ್ಯರಿಂದ ಗಿಡಕ್ಕೆ ನೀರು ಎರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಶಿಬಿರದಲ್ಲಿ ನವಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಅರುಣ್‌ಕುಮಾರ ಕೋಟೆಯವರು ಮಾನಸಿಕ ರೋಗದ ಕುರಿತು ವಿವರಿಸಿದರು. ಈ ಸಮಯದಲ್ಲಿ ನವಜೀವನ ಕಾರ್ಯಕ್ರಮದ ಸಂಯೋಜಕರಾದ ಪ್ರವೀಣ್‌ಕುಮಾರ್ ಶಿಬಿರಾರ್ಥಿಗಳಿಗೆ ವಿವಿಧ ದೈನಂದಿನ ಚಟುವಟಿಕೆ ಹಾಗೂ ಮನೆಯ ಸಣ್ಣ ಪುಟ್ಟ ಕೆಲಸದ ಚಟುವಟಿಕೆ ಮಾಡಿಸುವ ಮೂಲಕ ಅವರಲ್ಲಿ ಅರಿವನ್ನು ಮೂಡಿಸುವ ಕಾರ್ಯ ಮಾಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಸದಾನಂದ ಸ್ವಾಮಿ ಅವರು ಅಂಗವಿಕಲರ ಗುಂಪು ರಚನೆಯ ಕುರಿತು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 45 ಮಾನಸಿಕ ಅಸ್ವಸ್ಥರು ಹಾಗೂ ಪೋಷಕರು ಭಾಗವಹಿಸಿದ್ದರು, ಈ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫ್ರ್.ವಿಜಯಕುಮಾರ್ ವ್ಯವಸ್ಥಾಪಕರಾದ ಸಿಸ್ಟರ್ ವಿಲ್ಮಾ, ನವಜೀವನ ಕಾರ್ಯಕ್ರಮದ ಸಿಬ್ಬಂದಿ ವರ್ಗ ದವರು ಉಪಸ್ಥಿತರಿದ್ದರು.



ಪೂಜ್ಯ ರಾಬರ್ಟ್ ಮಿರಾಂದಾ
ಗುಲಬರ್ಗಾ ಧರ್ಮಾಧ್ಯಕ್ಷರು

ವಂ. ಫಾ॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ, ಕಲಬುರಗಿ










orbit humnabad
Orbit Bidar
@orbitbidar330
www.orbitbidar.in
+91 8660968063
+91 8971119914
Orbitbidar93@gmail.com

NH65, Near Railway Station Road, Humnabad 585330

# “ನವಜೀವನ (ಎ.ಪಿ.ಎಫ್) ಕಾರ್ಯಕ್ರಮ”

## “ಮಾನಸಿಕ ಅಸ್ವಸ್ಥತೆಯ ಕುರಿತು ಜಾಗೃತಿ ಕಾರ್ಯಕ್ರಮ”



ಮೇ 05.2024 ರಂದು ಹುಮನಾಬಾದ್ ತಾಲೂಕಿನ ಮಾಣಿಕ್‌ನಗರ ಗ್ರಾಮದಲ್ಲಿ ನರೇಗಾ ಕೆಲಸ ಮಾಡುವವರಿಗೆ ಮಾನಸಿಕ ಅಸ್ವಸ್ಥತೆಯ ಕುರಿತು ಮಾಹಿತಿ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಮಹಾದೇವಿ ಭಾಗವಹಿಸಿದ್ದರು. ಮಾನಸಿಕ ಆರೋಗ್ಯ ಹಾಗೂ ಮಾನಸಿಕ ಅಸ್ವಸ್ಥತೆ, ಮಾನಸಿಕ ಅಸ್ವಸ್ಥತೆಗೆ ಇರುವ ವೈಜ್ಞಾನಿಕವಾದ ಸೂಕ್ತ ಚಿಕಿತ್ಸೆ ಕುರಿತು ಸವಿವರವಾಗಿ ತಿಳಿಹೇಳಿದರು. ಒಬ್ಬ ವ್ಯಕ್ತಿ ಮಾನಸಿಕ ಆರೋಗ್ಯದಿಂದಿರಬೇಕಾದರೆ ತನ್ನ ಜೀವನಶೈಲಿಯಲ್ಲಿ ಉತ್ತಮ ಬದಲಾವಣೆಗಳನ್ನು ಮಾಡಿಕೊಳ್ಳುವುದರ ಮೂಲಕ ಆರೋಗ್ಯವಾಗಿ ಬದುಕಬಹುದು. ಅಂತೆಯೇ ಸರಕಾರದಿಂದ ಸಿಗುವ ವಿವಿಧ ಯೋಜನೆಗಳ ಕುರಿತು ಮಾಹಿತಿ ನೀಡಿದರು. ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸುವ ಮೂಲಕ ಸರಕಾರದ ಹಲವಾರು ಯೋಜನೆಗಳ ಪ್ರಯೋಜನವನ್ನು ಪಡೆಯಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಗ್ರಾಮದ ಹಲವಾರು ಜನರು ಭಾಗವಹಿಸಿ ಮಾನಸಿಕ ಆರೋಗ್ಯದ ಕುರಿತು ಮಾಹಿತಿ ಪಡೆದುಕೊಂಡರು.





ಮೇ 6.2024 ರಂದು ಹುಮ್ನಾಬಾದ್ ಪಟ್ಟಣದ ವಾಂಜರಿ ಓಣಿಯ ಹಿರಿಯ ನಾಗರಿಕರಿಗೆ ಮಾನಸಿಕ ಅಸ್ವಸ್ಥತೆಯ ಕುರಿತು ಅರಿವಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಲೋಕೇಶ್ ಅವರು ಮಾಹಿತಿಯನ್ನು ನೀಡಿದರು. ಮಾನಸಿಕ ಕಾಯಿಲೆಯ ಕುರಿತು ವಿವರಿಸಿದರು. ಮಾನಸಿಕ ರೋಗಿಗಳ ಲಕ್ಷಣ, ರೋಗದ ವಿಧ ಹಾಗೂ ರೋಗಕ್ಕೆ ಇರುವ ಸೂಕ್ತ ಚಿಕಿತ್ಸೆಯ ಕುರಿತು ಸವಿವರವಾಗಿ ಸರಳವಾಗಿ ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಜನರ ಅನುಮಾನಗಳನ್ನು ಪರಿಹರಿಸುತ್ತಾ ಸೂಕ್ತ ಮಾಹಿತಿಯನ್ನು ನೀಡಿ, ಮಾನಸಿಕ ರೋಗದ ಕುರಿತು ಇರುವಂತಹ ಪೂರ್ವಾಗ್ರಹಗಳನ್ನು ನಿವಾರಿಸಿದರು, ಓಣಿಯ  ಜನರು ಬಹು ಸಂಖ್ಯೆಯಲ್ಲಿ ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## “ಮಾನಸಿಕ ಅಸ್ವಸ್ಥರ ಸಮುದಾಯಧಾರಿತ ಪುನರ್ವಸತಿ ಕಾರ್ಯಕ್ರಮದ ಆಪ್ತ ಸಮಾಲೋಚನೆ”



ಮೇ 29/2024  ರಂದು ಹುಮ್ನಾಬಾದ್ ತಾಲೂಕಿನ ಹುಣಸಗೇರ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ, ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ನಡೆಯುತ್ತಿರುವ ನವಜೀವನ ಕಾರ್ಯಕ್ರಮದ  ಆಪ್ತ ಸಮಾಲೋಚಕರಾದ  ಶ್ರೀ. ರವಿ ಜಿ ಅವರು ಮಾನಸಿಕ ಅಸ್ವಸ್ಥರ ಸಮುದಾಯಧಾರಿತ ಪುನರ್ವಸತಿ ಕಾರ್ಯಕ್ರಮದ ಆಪ್ತ ಸಮಾಲೋಚನೆಯಲ್ಲಿ ಮಾನಸಿಕ ಅಸ್ವಸ್ಥರು ಎದುರಿಸುತ್ತಿರುವ ಸಮಸ್ಯೆಗಳನ್ನು ಹಾಗೂ ಚಿಕಿತ್ಸೆಗಳನ್ನು ಪಡೆಯುವ ಬಗ್ಗೆ ಮುಕ್ತವಾಗಿ ಚರ್ಚಿಸಿದರು. ಸಮಸ್ಯೆಗಳಿಗೆ ಪರಿಹಾರಗಳನ್ನು ಪಡೆದುಕೊಳ್ಳುವಲ್ಲಿ ಮತ್ತು ಚಿಕಿತ್ಸೆ ಉಚಿತವಾಗಿ ಪಡೆಯುವ ಕುರಿತು ಮಾಹಿತಿ ನೀಡಲಾಯಿತು.  ಈ ಗ್ರಾಮದ ಫಲಾನುಭವಿಗಳು ಕೌಟುಂಬಿಕ ಸಂಘರ್ಷ, ಆಸ್ತಿ ವ್ಯವಹಾರ ಹಾಗೂ ಅನೇಕ ಹಣಕಾಸು ವ್ಯವಹಾರಗಳಲ್ಲಿ ತೊಡಗಿ ತಮ್ಮನ್ನು ಮಾನಸಿಕ ಒತ್ತಡಕ್ಕೆ ಒಳಗಾಗಿಸಿಕೊಂಡಿದ್ದರು. ಫಲಾನುಭವಿಗಳ ದುಸ್ಥಿತಿಯನ್ನು ಕಂಡು ಪೋಷಕರು ತುಂಬಾ ಸಂಕಷ್ಟ ಅನುಭವಿಸುವ ಪರಿಸ್ಥಿತಿ ಎದುರಾಗಿತ್ತು. ಇಂಥ ದಯನೀಯ ಪರಿಸ್ಥಿತಿಯನ್ನು ಕಂಡು ಪೋಷಕರು ದಿಕ್ಕು ಕಾಣದಂತಾಗಿದ್ದರು ಹಾಗೂ ಕುಟುಂಬದ ಪರಿಸ್ಥಿತಿ ಅಧೋಗತಿಗೆ ದೂಡಲ್ಪಟ್ಟಿತ್ತು . ಇಂಥ ಸಂದರ್ಭದಲ್ಲಿಯೂ ಸಹ ಮುಂದಾಳತ್ವ ವಹಿಸಿಕೊಂಡು ಫಲಾನುಭವಿಗೆ ಉತ್ತಮ ರೀತಿಯಿಂದ ನೋಡಿಕೊಳ್ಳುತ್ತಿದ್ದಾರೆ. ಪೋಷಕರು ಕೆಲವು ವರ್ಷಗಳಿಂದ ಪ್ರತಿ ತಿಂಗಳು 3000 ಸಾವಿರದಿಂದ 7,000 ಸಾವಿರ ರೂಪಾಯಿ  ಚಿಕಿತ್ಸೆಗಾಗಿ ಖರ್ಚು ಮಾಡುತ್ತಿದ್ದರು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರ ಸರಿಯಾದ ಮಾರ್ಗದರ್ಶನದಿಂದಾಗಿ ಇಂದು ಸರಕಾರಿ ಆಸ್ಪತ್ರೆಯಲ್ಲಿ ಉಚಿತ ಹಾಗೂ ಸೂಕ್ತ ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಚಿಕಿತ್ಸೆಗಾಗಿ ವೆಚ್ಚ ಮಾಡುತ್ತಿದ್ದ ಆ ಹಣವನ್ನು ಕುಟುಂಬಕ್ಕಾಗಿ ಉಪಯೋಗಿಸುತ್ತಿದ್ದಾರೆ. ಕೆಲವರು ದಿನನಿತ್ಯದ ಕೆಲಸ ಕಾರ್ಯಗಳಿಗಾಗಿ ಉಪಯೋಗಿಸುತ್ತಿದ್ದಾರೆ. ಪ್ರತಿ ತಿಂಗಳ ಚಿಕಿತ್ಸೆಯ ಹಣವನ್ನು ಬೇರೆ ಬೇರೆ ಸಾಮಗ್ರಿಗಳನ್ನು ಪಡೆದುಕೊಳ್ಳಲು ಉಪಯೋಗವಾಗುತ್ತಿದೆ ಇದರಿಂದ ನಮಗೆ ತುಂಬಾ ಸಹಾಯವಾಗಿದೆ ಎಂದು ಹರ್ಷ ವ್ಯಕ್ತಪಡಿಸುತ್ತಿದ್ದಾರೆ. ಇಂದು ನಾವು ಮನೋವೈದ್ಯರ ಸಲಹೆ ಸೂಚನೆಯನ್ನು ಪಾಲಿಸುತ್ತಿದ್ದೇವೆ, ಫಲಾನುಭವಿಯ ಇತ್ತೀಚಿನ ವರ್ತನೆಯಲ್ಲಿ ಧನಾತ್ಮಕ ಬದಲಾವಣೆ ಕಂಡು ಬಂದಿದ್ದು ಕುಟುಂಬದವರು ಸಂತಸ ವ್ಯಕ್ತಪಡಿಸಿದ್ದಾರೆ. ಇನ್ನು ಮುಂದೆ ನಮ್ಮ ಗ್ರಾಮದ ವ್ಯಾಪ್ತಿಯಲ್ಲಿ ಮಾನಸಿಕ ಅಸ್ವಸ್ಥರು ಹೊಸದಾಗಿ ಕಂಡು ಬಂದರೆ, ಆರ್ಬಿಟ್ ಸಂಸ್ಥೆಯ ಸಹಾಯವಾಣಿಗೆ ಕರೆಯ ಮೂಲಕ ಮತ್ತು ಕಾರ್ಯಕರ್ತರ ಮೂಲಕ ಮಾಹಿತಿಯನ್ನು ನೀಡುತ್ತೇವೆ ಎಂದು ಸಂತೋಷದಿಂದ ತಿಳಿಸಿದರು. ಗ್ರಾಮದ ಜನರು ಮಾನಸಿಕ ಅಸ್ವಸ್ಥರ ಸೇವೆ ಮಾಡಲು ನಾವು ಸಹ ಕೈಜೋಡಿಸುತ್ತೇವೆ ಎಂದು ಪಣತೊಟ್ಟು ನಿಂತಿದ್ದಾರೆ. ಗ್ರಾಮಸ್ಥರು ಆರ್ಬಿಟ್ ಸಂಸ್ಥೆ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಸ್ಥೆಯವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದಾರೆ.

## “ಮಾನಸಿಕ ಅಸ್ವಸ್ಥತೆಯ ಕುರಿತು ಒಂದು ದಿವಸದ ತರಬೇತಿಯ ಕಾರ್ಯಗಾರ”




ಹುಮ್ನಾಬಾದ್ ತಾಲೂಕಿನ ಘಾಟ್‌ಬೊರಾಳ ಗ್ರಾಮದಲ್ಲಿ ಘಾಟ್ ಬೋರಳ ವಲಯ ಮಟ್ಟದ ಅಂಗನವಾಡಿ ಕಾರ್ಯಕರ್ತರಿಗೆ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥತೆಯ ಕುರಿತು ಒಂದು ದಿವಸದ ತರಬೇತಿ ಕಾರ್ಯಗಾರವನ್ನು ನಡೆಸಲಾಯಿತು. ಈ ತರಬೇತಿ ಕಾರ್ಯಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ಕುಮಾರ್ ಮತ್ತು ಶ್ರೀ ಹನುಮಂತ್ ರವರು ಆಗಮಿಸಿ ಅಂಗನವಾಡಿ ಕಾರ್ಯಕರ್ತರಿಗೆ ಆರೋಗ್ಯ, ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆ, ಮಾನಸಿಕ ಕಾಯಿಲೆಯ ಲಕ್ಷಣಗಳು ಹಾಗೂ ಮಾನಸಿಕ ಕಾಯಿಲೆಗೆ ಇರುವ ಸೂಕ್ತ ಚಿಕಿತ್ಸೆಯ ಕುರಿತು ಸಂಪೂರ್ಣ ಮಾಹಿತಿ ನೀಡಿದರು. ಮಾನಸಿಕ ಕಾಯಿಲೆ ಬಂದಾಗ ಮೂಢನಂಬಿಕೆಗೆ ಬಲಿಯಾಗದೆ, ಇದು ಒಂದುಮೆದುಳಿನ ಕಾಯಿಲೆ ಎಂದು ತಿಳಿದುಕೊಂಡು ತಜ್ಞ ಮನೋ ವೈದ್ಯರನು ಭೇಟಿ ಮಾಡಿ ಅವರ ಸಲಹೆ ಮೇರೆಗೆ ಚಿಕಿತ್ಸೆ ಪಡೆದು ಒಳ್ಳೆ ಆರೋಗ್ಯ ಹೊಂದಿಕೊಳ್ಳಬಹುದೆಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 30 ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## “ಮಾನಸಿಕ ಅಸ್ವಸ್ಥರಿಗಾಗಿ ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮ”



ಏಪ್ರಿಲ್ 22/2024 ರಂದು ಹುಮನಾಬಾದ ತಾಲೂಕಿನ ಸಿತಾಳ್ಗೆರ ಗ್ರಾಮದ ನರೇಗಾ ಕೂಲಿ ಕಾರ್ಮಿಕರಿಗೆ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯುಕ್ತ ಆಶಯದಲ್ಲಿ ನರೇಗಾ ಕೋಲಿ ಕಾರ್ಮಿಕರಿಗೆ ಮಾನಸಿಕ ರೋಗದ ಕುರಿತು ಅರಿವು ಮೂಡಿಸಲಾಯಿತು. ಖಿನ್ನತೆ ಅನ್ನೋದು ಒಂದು ಕಾಯಿಲೆ, ಮಾನಸಿಕ ಕಾಯಿಲೆಯ ಲಕ್ಷಣಗಳಾದ ನಿದ್ರಾ ಹೀನತೆ, ವಿಚಿತ್ರ ನಡವಳಿಕೆ, ವಿನಾಕಾರಣ ಅಳುವುದು, ವಿನಾಕಾರಣ ನಗುವದು, ವಿಪರೀತವಾದ ಮಾತುಗಳು, ತನ್ನಲ್ಲೇ ತಾನು ಮಾತನಾಡುವುದು ಮತ್ತು ಜನರೊಂದಿಗೆ ಬೆರೆಯದೆ ಇರುವಂಥ ಲಕ್ಷಣಗಳು ಒಬ್ಬ ವ್ಯಕ್ತಿಯಲ್ಲಿ ಕಂಡು ಬಂದರೆ ತಕ್ಷಣವೇ ವೈದ್ಯರ ಸಂಪರ್ಕಿಸಿ ಚಿಕಿತ್ಸೆಗೆ ಒಳಪಡಬೇಕು. ಸರ್ಕಾರಿ ಆಸ್ಪತ್ರೆಯಲ್ಲಿ ಮಾನಸಿಕ ಅಸ್ವಸ್ಥರ ತಪಾಸಣೆ ಹಾಗೂ ಚಿಕಿತ್ಸೆಗಾಗಿ ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರ ನಡೆಯುತ್ತದೆ ಇಲ್ಲಿ ತಜ್ಞ ಮನೋವೈದ್ಯರಿಂದ ಉಚಿತ ತಪಾಸಣೆ ಹಾಗೂ ಮಾತ್ರೆಗಳನ್ನು ನೀಡಲಾಗುತ್ತದೆ.ಆದ್ದರಿಂದ ಈ ಮೇಲ್ಕಂಡ ಮಾನಸಿಕ ಲಕ್ಷಣಗಳು ಕಂಡು ಬಂದರೆ ವೈದ್ಯರನ್ನು ಸಂಪರ್ಕಿಸಿ ಎಂದು ಜಾಗೃತಿ ಮೂಡಿಸಲಾಯಿತು. ಹುಮ್ನಾಬಾದ್ ತಾಲೂಕಿನ ಬೋತಗಿ ಗ್ರಾಮದ ಜೈಶೀಲ ತಂದೆ ಶಂಕ್ರಪ್ಪ ಇವರ ಮಗಳು ಸುಮಾರು 30 ವರ್ಷಗಳಿಂದ ಮಾನಸಿಕ ಖಿನ್ನತೆಗೆ ಒಳಗಾಗಿರುತ್ತಾರೆ. ಆರ್ಬಿಟ್ ಸಂಸ್ಥೆ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರಿಗಾಗಿ ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮ ಹುಮ್ನಾಬಾದ್ ತಾಲೂಕಿನಾದ್ಯಂತ ನಡೆಸುತ್ತಿದೆ. ಪ್ರತಿ ತಿಂಗಳು ನಾಲ್ಕನೇ ಶುಕ್ರವಾರ ಮಾನಸಿಕ ಅಸ್ವಸ್ಥರಿಗಾಗಿ ಮನೋವೈದ್ಯರು ಬರುತ್ತಾರೆಂದು ಪಾಲಕರಿಗೆ ಮಾಹಿತಿ ನೀಡಲಾಯಿತು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ಪ್ರತಿ ತಿಂಗಳು ಮಾಹಿತಿ ನೀಡುತ್ತಿದ್ದರು ಆದರೆ ಪೋಷಕರು ಸರಿಯಾಗಿ ಸ್ಪಂದಿಸುತ್ತಿರಲಿಲ್ಲ. ಆದರೆ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರ ಸತತ ಪ್ರಯತ್ನದಿಂದ ಮತ್ತು ಆರ್ಬಿಟ್ ಸಂಸ್ಥೆಯ ಆಪ್ತ ಸಮಾಲೋಚಕರಿಂದ ಆಪ್ತ ಸಮಾಲೋಚನೆಗೆ ಒಳಪಡಿಸಲಾಯಿತು ಹಾಗೂ ಆಶಾ ಕಾರ್ಯಕರ್ತರ ಸಹಾಯದೊಂದಿಗೆ ಅವರ ಮನವೊಲಿಸಿ ಕಳೆದ ಎರಡು ತಿಂಗಳಿಂದ ಮಾನಸಿಕ ಅಸ್ವಸ್ಥ ಫಲಾನುಭವಿಯನ್ನು ಚಿಕಿತ್ಸೆಗೆ ಒಳಪಡಿಸಲಾಗಿದೆ. ನಿರಂತರವಾಗಿ ಚಿಕಿತ್ಸೆ ಹಾಗೂ ಆಪ್ತ ಸಮಾಲೋಚನೆ ಪಡೆಯುತ್ತಿರುವುದರಿಂದ ಇತ್ತೀಚಿನ ದಿನಗಳಲ್ಲಿ ಮಾನಸಿಕ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಂಡು ಬಂದಿದೆ. ಆರ್ಬಿಟ್ ಸಂಸ್ಥೆಯ ಪ್ರಯತ್ನದ ಫಲವಾಗಿ ಇಂದು ನಮ್ಮ ಮಗಳ ಆರೋಗ್ಯದಲ್ಲಿ ಉತ್ತಮ ಸುಧಾರಣೆ ಕಂಡು ಬಂದಿದೆ ಎಂದು ಪೋಷಕರು ಆರ್ಬಿಟ್ ಸಂಸ್ಥೆಗೆ ಧನ್ಯವಾದಗಳು ಸಲ್ಲಿಸಿದ್ದಾರೆ.

## “ನರೇಗಾ ಕೂಲಿ ಕಾರ್ಮಿಕರಿಗೆ ಕ್ಯಾನ್ಸರ್ ರೋಗದ ಕುರಿತು ಅರಿವು”



ಆರ್ಬಿಟ್ ಸಂಸ್ಥೆ ಮತ್ತು ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಇವರ ಸಯುಕ್ತ ಆಶ್ರಯದಲ್ಲಿ ಬೋತಗಿ ಗ್ರಾಮದ ನರೇಗಾ ಕೂಲಿ ಕಾರ್ಮಿಕರಿಗೆ ಕ್ಯಾನ್ಸರ್ ರೋಗದ ಕುರಿತು ಅರಿವು ಮೂಡಿಸಲಾಯಿತು. ಕ್ಯಾನ್ಸರ್ ಅನ್ನುವ ಕಾಯಿಲೆ ಇತ್ತೀಚಿನ ದಿನಗಳಲ್ಲಿ ಅತಿ ಹೆಚ್ಚು ವೇಗವಾಗಿ ಹರಡುತ್ತಿದೆ, ಆದರಿಂದ ನಾವೆಲ್ಲರೂ ಜಾಗೃತರಾಗಬೇಕಾಗಿದೆ. ಅತೀಯಾದ ಸಾರಾಯಿ ಸೇವನೆ ಹಾಗೂ ತಂಬಾಕು ಸೇವನೆಯನ್ನು ಸಂಪೂರ್ಣವಾಗಿ ತ್ಯಜಿಸುವ ಮೂಲಕ ಆರೋಗ್ಯದ ಜೀವನವನ್ನು ನಡೆಸಬಹುದು. ಆರ್ಬಿಟ್ ಸಂಸ್ಥೆಯು ಹಳ್ಳಿಯಲ್ಲಿ ಕ್ಯಾನ್ಸರ್ ರೋಗದ ಕುರಿತು ಉಚಿತ ಶಿಬಿರಗಳನ್ನು ಆಯೋಜಿಸುತ್ತಿದೆ, ಉಚಿತ ತಪಾಸಣಾ ಶಿಬಿರದಲ್ಲಿ ಭಾಗವಹಿಸಿ ತಪಾಸಣೆಗೆ ಒಳಗಾಗಬೇಕು. ದೇಹದ ಮೇಲೆ ಯಾವುದೇ ರೀತಿಯ ಗೆಡ್ಡೆಗಳು ಕಂಡು ಬಂದರೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ ತಪಾಸಣೆಗೆ ಒಳಗಾಗಬೇಕೆಂದು ಮಾಹಿತಿ ನೀಡಿದರು.

## “ಮಾನಸಿಕ ಅಸ್ವಸ್ಥರ ಕುರಿತು ಒಂದು ದಿನದ ಆಶಾ ಕಾರ್ಯಕರ್ತೆಯರಿಗೆ ಸಹಭಾಗಿದಾರರ ತರಬೇತಿ”



ಮೇ 25.2024 ರಂದು ಹುಮ್ನಾಬಾದ್ ತಾಲೂಕಿನ ದುಬಲಗುಂಡಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಒಂದು ದಿನದ ಆಶಾ ಕಾರ್ಯಕರ್ತೆಯರಿಗೆ ಸಹಭಾಗಿದಾರರ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ವಿಜಯಕುಮಾರ್ ಸಭೆಯನ್ನು ಕುರಿತು ಮಾತನಾಡಿದರು. ತರಬೇತಿಯಲ್ಲಿ ಮಾನಸಿಕ ಆರೋಗ್ಯದ ವಿಷಯಗಳನ್ನು ಚರ್ಚಿಸಿ ಸಲಹೆ ಸೂಚನೆಗಳನ್ನು ನೀಡಿದರು, ಆಶಾ ಕಾರ್ಯಕರ್ತರಿಗೆ ಚಟುವಟಿಕೆಯ ಮೂಲಕ ಅರ್ಥವಾಗುವ ರೀತಿಯಲ್ಲಿ ತರಬೇತಿಯನ್ನು ನಡೆಸಿಕೊಟ್ಟರು. ಈ ತರಬೇತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು, ಆಪ್ತ ಸಮಾಲೋಚಕರು, ಸಂಸ್ಥೆಯ ಕಾರ್ಯಕರ್ತರು ಹಾಗೂ 38 ಜನ ಆಶಾ ಕಾರ್ಯಕರ್ತರು ಉಪಸ್ಥಿತರಿದ್ದು ಹಾಗೂ ಮಾಹಿತಿಯನ್ನುಪಡೆದುಕೊಂಡರು.

## “ಮಾನಸಿಕ ಅಸ್ವಸ್ಥರ ಸರ್ವೆ ಕಾರ್ಯ”



ಹುಮನಾಬಾದ್ ತಾಲೂಕಿನ ನಂದಗಾಂವ ಗ್ರಾಮದಲ್ಲಿ ಮೇ ತಿಂಗಳ 2024 ರಿಂದ. ಸಮಾಜದಿಂದ ತಳಲ್ಪಟ್ಟ ಮಾನಸಿಕ ಅಸ್ವಸ್ಥರನ್ನು ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮ ಹಾಗು ಅಜೀಂ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಕಳೆದ ಮೂರು ತಿಂಗಳಿಂದ ಸರ್ವೆ ಕಾರ್ಯ ಮಾಡಲಾಗುತ್ತಿದೆ. ಮಾನಸಿಕ ಅಸ್ವಸ್ಥರನು, ಸಮಾಜದಿಂದ ಹೊರಗುಳಿದವರು, ಖಿನ್ನತೆಗೆ ಒಳಗಾಗಿದ್ದ ಜನರನ್ನು ಮುಖ್ಯ ವಾಹಿನಿಗೆ ತರಲು, ಚಿಕಿತ್ಸೆ ಪಡೆಯಲು ಪ್ರೇರಣೆ ಮಾಡುವದಲ್ಲದೆ, ಖಿನ್ನತೆಗೆ ಒಳಗಾಗಿದ್ದ ರೋಗಿಗಳನ್ನು ಕೌನ್ಸಿಲಿಂಗ್ ಮಾಡಿಸುವದರ ಮುಖಾಂತರ ಅವರನ್ನು ಮುಖ್ಯ ವಾಹೀನಿಗೆ ತರಲಾಗುತ್ತಿದೆ. ಇದರಿಂದ ಮಾನಸಿಕ ಅಸ್ವಸ್ಥರು ಸಾಮನ್ಯ ಜೀವನ ಜೀವಿಸುತಿದ್ದಾರೆ.

# “ಮಹಿಳಾ ಸಬಲೀಕರಣ ಕಾರ್ಯಕ್ರಮ”

## “ಜನಶಕ್ತಿ ಮಹಿಳಾ ತಾಲೂಕ ಒಕ್ಕೂಟದ ಸಭೆ”



ಮೇ 9.2024 ರಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ನಲ್ಲಿ ಜನಶಕ್ತಿ ಮಹಿಳಾ ಒಕ್ಕೂಟದ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ತಾಲೂಕು ಒಕ್ಕೂಟದಲ್ಲಿ ಎರಡನೇ ಉದ್ದೇಶಕ್ಕೆ ಸಂಬಂಧಿಸಿದಂತೆ ಮಹಿಳೆಯರಲ್ಲಿ ನಾಯಕತ್ವ ಗುಣ ಬೆಳೆಯಬೇಕು, ದೌರ್ಜನ್ಯದ ವಿರುದ್ಧ ಧ್ವನಿ ಎತ್ತುವಂತ ಮನೋಭಾವನೆ ಬೆಳೆಸಿಕೊಳ್ಳಬೇಕು. ಮಹಿಳೆಯು ಉತ್ತಮ ಶಿಕ್ಷಣ ಪಡೆಯುವುದರೊಂದಿಗೆ ಸಮುದಾಯದಲ್ಲಿ ಸಬಲತೆಯಿಂದ ಬದುಕು ಸಾಗಿಸಬಹುದು ಎಂದು ತಿಳಿಸಿದರು. ಈ ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಶ್ರೀ ಗುಂಡಪ್ಪ ಮಾಜಿ ಗ್ರಾಮ ಪಂಚಾಯತ್ ಸದಸ್ಯರು ಸರ್ಕಾರದ ವಿವಿಧ ಸೌಲಭ್ಯಗಳನ್ನು ಕುರಿತು ಮಾತನಾಡಿದರು. ಲೇಬರ್ ಕಾರ್ಡ್ ನಿಂದ ಸಿಗುವಂತಹ ಸೌಲಭ್ಯದ ಕುರಿತು ಸವಿಸ್ತಾರವಾಗಿ ಮಾಹಿತಿ ನೀಡಿದರು. ಜಿಲ್ಲಾ ಕೈಗಾರಿಕಾ ಇಲಾಖೆ, ತೋಟಗಾರಿಕೆ ಇಲಾಖೆ, ಪಶು ಸಂಗೋಪನೆ ಇಲಾಖೆ ಹೀಗೆ ಹಲವಾರು ಇಲಾಖೆಗಳಿಂದ ಸಿಗುವ ತರಬೇತಿಗಳು ಹಾಗೂ ಸಬ್ಸಿಡಿಯ ಕುರಿತು ಮಹಿಳೆಯರಿಗೆ ಮನವರಿಕೆ ಮಾಡಿಸಿದರು. ಈ ಸಭೆಯಲ್ಲಿ 22 ಮಹಿಳೆಯರು, ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕರು, ಕಾರ್ಯಕರ್ತರು ಭಾಗವಹಿಸಿ ವಿವಿಧ ಸರ್ಕಾರಿ ಸೌಲಭ್ಯಗಳು ಹಾಗೂ ಸಂಪನ್ಮೂಲಗಳ ಸದುಪಯೋಗ ಪಡೆದುಕೊಂಡು ಮಹಿಳೆಯರು ಸಬಲರಾಗುವುದರ ಕುರಿತು ಮಾಹಿತಿ ಪಡೆದುಕೊಂಡರು.

## “ವಿಶ್ವ ತಾಯಂದಿರ ದಿನಾಚರಣೆ”



ಮೇ 13.2024 ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಕೇಡ್ ಬಿ ಗ್ರಾಮದಲ್ಲಿ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಅಮಿತಾ ರವರು ‘ವಿಶ್ವ ತಾಯಂದಿರ ದಿನ’ವನ್ನು ಆಚರಣೆ ಮಾಡಿದರು. ತಾಯಿಯ ಸ್ಥಾನವು ಅತಿ ಅಮೂಲ್ಯವಾದದ್ದು ಒಂದು ಮಗುವಿಗೆ ಜನ್ಮ ಕೊಡಬೇಕಾದರೆ ಅವಳ ಜೀವವನ್ನೇ ಪಣಕಿಟ್ಟು ಜನ್ಮ ನೀಡುತ್ತಾಳೆ. ‘ಮನೆಯೇ ಮೊದಲ ಪಾಠಶಾಲೆ ತಾಯಿಯೇ ಮೊದಲ ಗುರು’ ಎಂಬುದು ಸತ್ಯವಾದ ಮಾತು ಇದನ್ನು ಪ್ರತಿಯೊಬ್ಬರೂ ಅರಿತುಕೊಂಡು ಎಲ್ಲಾ ತಾಯಂದಿರಿಗೆ ಧನ್ಯವಾದ ಸಲ್ಲಿಸುವುದು ಹಾಗೂ ಋಣವನ್ನು ತೀರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ತಿಳಿಸಿದರು. ಈ ಆಚರಣೆಯಲ್ಲಿ ಸ್ವ ಸಹಾಯ ಸಂಘ ಒಟ್ಟು 18 ಮಹಿಳೆಯರು ಭಾಗವಹಿಸಿ, ತಾಯಿಯ ತ್ಯಾಗ ಮತ್ತು ಪ್ರೀತಿಯ ಗುಣಗಳ ಬಗ್ಗೆ ಪರಸ್ಪರ ಚರ್ಚಿಸಿ ತಿಳಿದುಕೊಂಡರು.

## "ಸಂವಿಧಾನದ ಅರಿವು ಮೂಡಿಸುವ ಕುರಿತು ತರಬೇತಿ"



ಮೇ 22.2024 ರಂದು ಭಾತಂಬ್ರಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ಸುಜಾತ ರವರು 'ಸಂವಿಧಾನದ ಅರಿವು ಮೂಡಿಸುವ' ಕುರಿತು ತರಬೇತಿಯನ್ನು ಆಯೋಜಿಸಿದ್ದರು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾದ ನವಜೀವನ ಎಲ್‌ಎಲ್‌ಎಲ್‌ಎಫ್ ಕಾರ್ಯಕ್ರಮದ ಕಾರ್ಯಕರ್ತೆಯಾದ ಕುಮಾರಿ ಅಶ್ವಿನಿ ರವರು ಸಂವಿಧಾನದ ಕುರಿತು ವಿಸ್ತೃತವಾದ ಮಾಹಿತಿಯನ್ನು ನೀಡಿದರು. ಭಾರತದ ಪ್ರತಿಯೊಬ್ಬ ಪ್ರಜೆಯೂ ಸಂವಿಧಾನದ ಪ್ರಕಾರ ಸಮಾನ ಅಧಿಕಾರಗಳನ್ನು ಹೊಂದಿದ್ದಾನೆ. ಸಂವಿಧಾನವು ನಮಗೆ ಹಲವಾರು ಹಕ್ಕುಗಳನ್ನು ನೀಡಿದೆ ಅವುಗಳಲ್ಲಿ ಮೂಲಭೂತ ಹಕ್ಕುಗಳು ತುಂಬಾ ಮಹತ್ವವನ್ನು ಪಡೆದುಕೊಂಡಿವೆ, ಒಬ್ಬ ವ್ಯಕ್ತಿಯು ಸಮುದಾಯದಲ್ಲಿ ಸಮಾನತೆಯಿಂದ, ನಿರ್ಭೀತಿಯಿಂದ, ಸ್ವಾತಂತ್ರ್ಯವಾಗಿ ಬದುಕಲು ಈ ಮೂಲಭೂತ ಹಕ್ಕುಗಳು ತುಂಬಾ ಸಹಾಯಕವಾಗಿವೆ. ಪ್ರತಿಯೊಬ್ಬ ನಾಗರಿಕರು ಸಂವಿಧಾನದ ಹಕ್ಕುಗಳನ್ನು ಅನುಭವಿಸುವುದರ ಜೊತೆಗೆ ಜವಾಬ್ದಾರಿಗಳನ್ನು ನಿಭಾಯಿಸಲು ಜವಾಬ್ದಾರನಾಗಿರುತ್ತಾನೆ. ಪ್ರತಿಯೊಬ್ಬ ಪ್ರಜೆಯು ತಮ್ಮ ಕೊಡುಗೆಯನ್ನು ಕೊಡುವುದರ ಮೂಲಕ ದೇಶದ ಏಕತೆ ಮತ್ತು ಸಮಗ್ರತೆಗೆ ಶ್ರಮಿಸಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ 57 ಜನ ಭಾಗವಹಿಸಿ ಸವಿಧಾನದ ಹಕ್ಕುಗಳು ಹಾಗೂ ಜವಾಬ್ದಾರಿಯ ಕುರಿತು ಮಾಹಿತಿಯನ್ನು ಪಡೆದುಕೊಂಡರು.

## "ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆ ಕುರಿತು ತರಬೇತಿ"




ಮೇ 2.2024ರಂದು ಬಳ್ಳಾರಿ ಬಿಡಿಎಸ್ ಸಂಸ್ಥೆಯ ಸಭಾಂಗಣದಲ್ಲಿ ಕ್ರಾಸ್ ಸಂಸ್ಥೆ ಹಾಗೂ ಮಹಿಳಾ ಸಬಲೀಕರಣ ಯೋಜನೆಯ ಸಂಯುಕ್ತ ಆಶ್ರಯದಲ್ಲಿ ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆ ಕುರಿತು ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು . ಬಿಡಿಎಸ್ ಸಂಸ್ಥೆಯ ನಿರ್ದೇಶಕರಾದ ಫಾದರ್ ಯಾಗಪ್ಪನವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹವಾಮಾನದಲ್ಲಿ ಏರುಪೇರು ಆಗುವುದನ್ನು ನೋಡುತ್ತಿದ್ದೇವೆ ಮತ್ತು ಅನುಭವಿಸುತ್ತಿದ್ದೇವೆ. ಆದ್ದರಿಂದ ಮಿಜೋರಿಯರ್ ಯೋಜನೆಯಿಂದ ಹವಮಾನ ಬದಲಾವಣೆ ಕುರಿತು ತರಬೇತಿ ಹಮ್ಮಿಕೊಂಡಿರುವುದು ನಮಗೆ ಬಹಳ ಸಂತೋಷವಾಗಿದೆ. ಆದುದರಿಂದ ಈ ಮೂರು ಸಂಸ್ಥೆಯಿಂದ ಆಗಮಿಸಿದ ಶಿಬಿರಾರ್ಥಿಗಳು ತರಬೇತಿಯಲ್ಲಿ ಭಾಗವಹಿಸಿ, ಭೂಮಿತಾಯಿಯ ರಕ್ಷಣೆಯನ್ನು ಮಾಡೋಣ, ಪರಿಸರವನ್ನು ರಕ್ಷಿಸೋಣ ಎಂದು ಶುಭ ಹಾರೈಸಿದರು. ಮಹಿಳಾ ಸಬಲೀಕರಣ ಯೋಜನೆಯ ರಾಜ್ಯ ಸಂಯೋಜಕರಾದ ಶ್ರೀಮತಿ ಲೈನ ರವರು ಪ್ಲಾಸ್ಟಿಕ್ ಬಳಕೆ ಮಾಡುವುದರಿಂದ ದೀರ್ಘಾವಧಿಯಲ್ಲಿ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಹಾಗೂ ಪ್ಲಾಸ್ಟಿಕ್ ಸುಡುವುದರಿಂದ ಓಜೋನ್ ಪದರಕ್ಕೆ ಹಾನಿಯಾಗಿ ಬಿಸಿಲಿನ ಶಾಖ ಹೆಚ್ಚಾಗುತ್ತದೆ. ನಗರೀಕರಣದಿಂದಾಗಿ ಮಾನವ ಅತಿಯಾಗಿ ಕಾಂಕ್ರೀಟ್ ಕಾಡನ್ನು ಬೆಳೆಸುವುದರಲ್ಲಿ ಮಗ್ನ ಆಗಿದ್ದಾನೆ ಹಾಗೆಯೇ ನಮ್ಮ ಮನೆಯ ಅಂಗಳಗಳಲ್ಲಿ, ನಡೆದಾಡುವ ರಸ್ತೆಗಳಲ್ಲಿ, ಸಿಸಿ ರಸ್ತೆ ಡಾಂಬರೀಕರಣ ಮಾಡುವುದರಿಂದ ಮಳೆ ಬಂದರು ನೀರು ಇಂಗದೆ ಇರುವುದರಿಂದ ಎಲ್ಲೆಲ್ಲೋ ಹರಿದು ಹೋಗುತ್ತವೆ, ನೀರು ಭೂಮಿಯಲ್ಲಿ ಇಂಗುವುದಿಲ್ಲ ಹಾಗಾಗಿ ಭೂಉಷ್ಣತೆ ಹೆಚ್ಚಳವಾಗುತ್ತದೆ. ಪ್ರತಿಯೊಬ್ಬ ನಾಗರಿಕರು ಪರಿಸರದ ಕುರಿತು ಕಾಳಜಿ ವಹಿಸಿ ಮನೆಗೊಂದು ಮರ ಊರಿಗೊಂದು ವನ ಎಂಬಂತೆ ಹಸಿರೀಕರಣದ ಕಾರ್ಯವು ಅಭಿಯಾನದ ರೀತಿಯಲ್ಲಿ ನಡೆಯಬೇಕಾಗಿರುವುದು ಇಂದಿನ ಅತ್ಯವಶ್ಯಕ ಕೆಲಸವಾಗಿದೆ ಎಂದು ನುಡಿದರು. ಈ ತರಬೇತಿಯಲ್ಲಿ ಭಾಗವಹಿಸಿರುವ ಪ್ರತಿಯೊಬ್ಬರು ಮಾಹಿತಿಯನ್ನು ಪಡೆದುಕೊಂಡು ಈ ಮಾಹಿತಿಯನ್ನು ಮತ್ತೊಬ್ಬರಿಗೆ ಮನವರಿಕೆಯಾಗುವ ರೀತಿಯಲ್ಲಿ ಪಸರಿಸಬೇಕೆಂದು ಕರೆ ನೀಡಿದರು.

## "ಸರ್ಕಾರಿ ಸೌಲಭ್ಯಗಳ ಕುರಿತು ತರಬೇತಿ"



ಮೇ 21.2024 ರಂದು ಮಹಿಳಾ ಯೋಜನೆ ಅಡಿಯಲ್ಲಿ ಬಸವಕಲ್ಯಾಣದ ಜ್ಞಾನಪ್ರಿಯ ಶಾಲೆಯಲ್ಲಿ ಸಂಸ್ಥೆಯ ಸಹ ನಿರ್ದೇಶಕರಾದ ವಂದನಿಯ ಫಾದರ್ ವಿಜಯ ರವರು ಮಹಿಳೆಯರಿಗೆ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಮಹಿಳೆಯರಿಗಾಗಿ ಹಲವಾರು ಸರ್ಕಾರಿ ಸೌಲಭ್ಯಗಳು ಲಭ್ಯವಿದ್ದು, ಆ ಯೋಜನೆಗಳ ಲಾಭಗಳನ್ನು ಪಡೆದುಕೊಳ್ಳುವ ಮೂಲಕ ಮಹಿಳೆಯರು ಆರ್ಥಿಕವಾಗಿ ಸಬಲರಾಗಬೇಕು ಎಂದು ತಿಳಿ ಹೇಳಿದರು. ಸ್ತ್ರೀಯರು ಹೆಚ್ಚಿನ ಪ್ರಮಾಣದಲ್ಲಿ ಯೋಜನೆಯ ಲಾಭಗಳನ್ನು ಪಡೆದುಕೊಳ್ಳಬೇಕು ಹಾಗೂ ಆ ಯೋಜನೆಯ ಸದುಪಯೋಗವನ್ನು ಪಡೆದುಕೊಂಡು ಮತ್ತೊಬ್ಬರಿಗೆ ಮಾದರಿಯಾಗಿ ಬದುಕಬೇಕು ಎಂದು ತಿಳಿಹೇಳಿದರು. ಮಹಿಳೆಯರು ಇಂದಿನ ದಿನಗಳಲ್ಲಿ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳುವುದರ ಮೂಲಕ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕು ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಗ್ರಾಮದ ಜನರು ಬಹುಸಂಖ್ಯೆಯಲ್ಲಿ ಭಾಗವಹಿಸುವುದರ ಮೂಲಕ ಮಾಹಿತಿಯನ್ನು ಪಡೆದುಕೊಂಡರು.

## "ತಾಲೂಕ ಒಕ್ಕೂಟ ಜನ ಜಾಗೃತಿ ಸಭೆ"



ಮೇ 14.2024 ರಂದು ಭಾಲ್ಕಿ ತಾಲೂಕಿನ ದಿವ್ಯ ಜ್ಯೋತಿ ಚರ್ಚ ಅವರಣದಲ್ಲಿ ಮಹಿಳಾ ಸಬಲೀಕರಣದ ಕಾರ್ಯಕರ್ತರು ಶ್ರೀಮತಿ ಸುಜಾತ ಮತ್ತು ಪ್ರಭಾವತಿ ರವರು 'ತಾಲೂಕು ಒಕ್ಕೂಟ ಜನ ಜಾಗೃತಿ ಸಭೆ'ಯನ್ನು ಆಯೋಜಿಸಿದ್ದರು. ಈ ಸಭೆಗೆ ಸಂಪನ್ಮೂಲ ವ್ಯಕ್ತಿಯಾದ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರು ಫಾದರ್ ವಿಜಯ್ ಕುಮಾರ್ ಹಾಗೂ ಮಹಿಳಾ ಸಬಲೀಕರಣದ ಯೋಜನೆಯ ಸಂಯೋಜಕರಾದ ಶ್ರೀಮತಿ ನಿರ್ಮಲಾ ರವರು ಭಾಗವಹಿಸಿದ್ದರು. ಸಹ ನಿರ್ದೇಶಕರು ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಿದ್ದರು ಹಾಗೂ ಸಂಘ , ಮಹಾಸಂಘ, ತಾಲೂಕ ಒಕ್ಕೂಟ, ಜಿಲ್ಲಾ ಒಕ್ಕೂಟಗಳು ಉತ್ತಮ ರೀತಿಯಿಂದ ಬೆಳೆಯಬೇಕಾದರೆ ಸಂಘದ ಪ್ರತಿಯೊಬ್ಬ ಮಹಿಳೆಯು ವೈಯಕ್ತಿಕವಾಗಿ ಬೆಳೆಯಬೇಕು ಎಂದು ಮಾಹಿತಿ ನೀಡಿದ್ದರು. ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕರಾದ ಶ್ರೀಮತಿ ನಿರ್ಮಲ ಅವರು ಇನ್ನೂ ಉತ್ತಮವಾಗಿ ತಾಲೂಕ ಒಕ್ಕೂಟ, ಜಿಲ್ಲೆ ಒಕ್ಕೂಟ, ಮಹಾಸಂಗಗಳು ಬೆಳೆಯಬೇಕು ಇದಕ್ಕೆಲ್ಲ ಪ್ರತಿಯೊಬ್ಬ ಸದಸ್ಯರ ಸಹಕಾರ ಅತ್ಯಗತ್ಯ ಎಂದು ತಿಳಿಸಿದರು. ಪ್ರತಿಯೊಂದು ಸಂಘದ ಅಧ್ಯಕ್ಷರು, ಕಾರ್ಯದರ್ಶಿ, ಸದಸ್ಯರು ಮಹಾಸಂಘ ದಲ್ಲಿ ಮಾಡಿದ ಸಾಧನೆಗಳನ್ನು ಒಕ್ಕೂಟದ ಸಭೆಯಲ್ಲಿ ವ್ಯಕ್ತಪಡಿಸಿದ್ದರು. ಮುಂದಿನ ದಿನಗಳಲ್ಲಿ ನಾವು ಹಲವಾರು ಉತ್ತಮ ಕೆಲಸ, ಕಾರ್ಯಗಳನ್ನು ಮಾಡಲು ಯೋಜನೆಗಳನ್ನು ಹೊಂದಿದ್ದೇವೆ ಆ ಯೋಜನೆಗಳನ್ನು ಸಕಾಲದಲ್ಲಿ ಪೂರ್ಣಗೊಳಿಸುತ್ತೇವೆ ಎಂದು ಸಂಘದ ಸದಸ್ಯರು ಮನವರಿಕೆ ಮಾಡಿಕೊಟ್ಟರು.

## "ರಕ್ಷಣೆ ಹಾಗೂ ಸಂರಕ್ಷಣೆ ಕುರಿತು ತರಬೇತಿ"



ಮೇ 3.2024 ರಂದು ಬಿ.ಡಿ.ಡಿ.ಎಸ್ ಸಂಸ್ಥೆ ಬಳ್ಳಾರಿಯಲ್ಲಿ ಮಹಿಳಾ ಸಬಲೀಕರಣ ಯೋಜನೆಯ ಅಡಿಯಲ್ಲಿ ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ಫಾದರ್ ರಿಚರ್ಡ್ ಪಾಯಸ್ ರವರು ರಕ್ಷಣೆ ಹಾಗೂ ಸಂರಕ್ಷಣೆಯ ಕುರಿತು ತರಬೇತಿಯನ್ನು ನೀಡಿದರು. ಸಮುದಾಯದಲ್ಲಿ ಜನರ ಮೇಲೆ ದಬ್ಬಾಳಿಕೆ, ದೌರ್ಜನ್ಯ ಸಮಸ್ಯೆಗಳು ಉಂಟಾದಾಗ ರಕ್ಷಣೆ ಮತ್ತು ಸಂರಕ್ಷಣೆ ಹೇಗೆ ಮಾಡಬೇಕು ಎನ್ನುವುದರ ಕುರಿತು ಸವಿಸ್ತಾರವಾಗಿ ವಿವರಿಸಿದರು. ಮಕ್ಕಳು, ಮಹಿಳೆಯರು, ಹಿರಿಯರು, ದುರ್ಬಲರಿಗೂ ರಕ್ಷಣೆ ಮತ್ತು ಸಂರಕ್ಷಣೆ ಹಾಗೂ ಘನತೆ ಮತ್ತು ಗೌರವದಿಂದ ಬಾಳಲು ಪ್ರೇರಣೆ ನೀಡಬೇಕು. ಪ್ರತಿಯೊಂದು ಸಂಸ್ಥೆಯು ರಕ್ಷಣಾ ನೀತಿಯನ್ನು ಹೊಂದಿರುತ್ತದೆ ಹಾಗೂ ಸಂಸ್ಥೆ ಸಿಬ್ಬಂದಿ ವರ್ಗ ಫಲಾನುಭವಿಗಳಿಗಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ ಎನ್ನುವುದನ್ನು ಸವಿಸ್ತಾರವಾಗಿ ತಿಳಿಸಿದರು. ತರಬೇತಿಯಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳು ಸಂರಕ್ಷಣೆ ಮತ್ತು ರಕ್ಷಣೆಗಿರುವ ವ್ಯತ್ಯಾಸದ ಹಾಗೂ ಮಹತ್ವದ ಕುರಿತು ಮಾಹಿತಿಯನ್ನು ಪಡೆದುಕೊಂಡರು.

## "ಉಚಿತ ಆರೋಗ್ಯ ತಪಾಸಣೆ ಮತ್ತು ಕ್ಯಾನ್ಸರ್ ತಪಾಸಣೆ ಶಿಬಿರ"



ಮೇ 28.2024 ರಂದು ಔರಾದ್ ತಾಲೂಕಿನ ನಾಗಮಾರಪಳ್ಳಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ, ಇಂಡಿಯನ್ ಕ್ಯಾನ್ಸರ್ ಸೊಸೈಟಿ ಹಾಗೂ ಸೈಂಟ್ ಮದರ್ ತೆರೇಸಾ ಶಿಕ್ಷಣ ಸಂಸ್ಥೆ ನಾಗಮಾರಪಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣೆ ಮತ್ತು ಕ್ಯಾನ್ಸರ್ ತಪಾಸಣೆ ಶಿಬಿರ ಆಯೋಜಿಸಲಾಯಿತು. ಈ ಶಿಬಿರವು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಲಾಯಿತು, ನಾಗಮಾರಪಳ್ಳಿ ಗ್ರಾಮ ಪಂಚಾಯತಿಯ



ಸದಸ್ಯರಾದ ಶ್ರೀ ಸತೀಶ್ ಪಾಟಿಲ್, ಶ್ರೀ ಶಿವ ಪಾಟೀಲ್, ಶ್ರೀ ಜೀವನ್ ಹಾಗೂ ಆರ್ಬಿಟ್ ಸಂಸ್ಥೆಯ ಔರಾದ್ ತಾಲೂಕಿನ ಇಂಚಾರ್ಜ್ ಆಗಿರುವ ಸಿಸ್ಟರ್ ಲಿನೆಟ್ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ತಂಡದವರು, ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಸುಭಾಷ್ ಮಾನಕರೆ, ಶ್ರೀ ಯೋಹಾನ್, ಶ್ರೀ ಸುಕ್ಕು ರವರು ಉಪಸ್ಥಿತರಿದ್ದರು. ಶಿಬಿರದಲ್ಲಿ ಗುರುರಾಜ್ ಕುಲಕರ್ಣಿ ರೀಜನಲ್ ಆಪರೇಷನ್ ಮ್ಯಾನೇಜರ್ ಅವರು ಕ್ಯಾನ್ಸರ್ ಕುರಿತು ಜನರಲ್ಲಿ ಜಾಗೃತಿ ಮೂಡಿಸಿದರು, ಕ್ಯಾನ್ಸರ್ ವಿರುದ್ಧ ನಾವು ಹೋರಾಡಬೇಕಾದರೆ ತಂಬಾಕು ಸೇವನೆ ಸಂಪೂರ್ಣವಾಗಿ ತ್ಯಜಿಸಬೇಕು. ಆರೋಗ್ಯಯುತವಾದ ಜೀವನ ಶೈಲಿಯೂ ನಮ್ಮದಾಗಿಸಿಕೊಳ್ಳಬೇಕು. ಪೂರ್ವದಲ್ಲಿಯೇ ಕ್ಯಾನ್ಸರ್ ತಪಾಸಣೆಗೆ ಒಳಗಾಗಿ ಸೂಕ್ತ ಚಿಕಿತ್ಸೆ ಹಾಗೂ ಮಾರ್ಗದರ್ಶನ ಪಡೆಯುವಂತೆ ಕರೆ ನೀಡಿದರು, ಈ ಶಿಬಿರದಲ್ಲಿ ಗ್ರಾಮದ ಒಟ್ಟು 60 ಜನರು ಕ್ಯಾನ್ಸರ್ ತಪಾಸಣೆಗೆ ಒಳಗಾಗಿ ಶಿಬಿರದ ಸದುಪಯೋಗ ಪಡೆದುಕೊಂಡರು.



## "ಸರ್ಕಾರಿ ಸೌಲಭ್ಯಗಳ ಕುರಿತು ತರಬೇತಿ"



ಮೇ 9.2024ರಂದು ಶಾಪೂರ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ರೋಸ್ ಮೇರಿ ಅವರು ಸರ್ಕಾರಿ ಸೌಲಭ್ಯಗಳ ಕುರಿತು ಮಹಿಳೆಯರಿಗೆ ಮಾಹಿತಿ ನೀಡಿದರು. ಲೇಬರ್ ಕಾರ್ಡ್ ಹಾಗೂ ಹೆಲ್ತ್ ಕಾರ್ಡ್ ಮಾಡಿಸಿಕೊಳ್ಳುವುದರ ಕುರಿತು ಸೂಕ್ತ ಮಾರ್ಗದರ್ಶನ ನೀಡಲಾಯಿತು. ಹೆಲ್ತ್ ಕಾರ್ಡ್ ಹೇಗೆ ಉಪಯೋಗಿಸಬೇಕೆಂದು ಮಾಹಿತಿ ನೀಡಲಾಯಿತು. ಮೊದಲು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗುವಾಗ ತಮ್ಮಲ್ಲಿರುವ ಹೆಲ್ತ್ ಕಾರ್ಡ್ ಕುರಿತು ಆಸ್ಪತ್ರೆಯ ಸಿಬ್ಬಂದಿಯವರಿಗೆ ಮಾಹಿತಿ ನೀಡಬೇಕು. ಮೊದಲು ಆಸ್ಪತ್ರೆಯ ಖರ್ಚು ವೆಚ್ಚಗಳನ್ನು ಸ್ವಂತ ಹಣದಿಂದ ಸಂದಾಯ ಮಾಡಿ ನಂತರ ಹೆಲ್ತ್ ಕಾರ್ಡ್ ಉಪಯೋಗಿಸಿಕೊಂಡು ಸಂದಾಯ ಮಾಡಿರುವ ಹಣವನ್ನು ಹಿಂದಕ್ಕೆ ಪಡೆಯಬಹುದು ಎಂದು ಮಾಹಿತಿ ನೀಡಲಾಯಿತು. ಈ ಮಾಹಿತಿ ನೀಡುವ ಕಾರ್ಯಕ್ರಮದಲ್ಲಿ ಗ್ರಾಮದ ಅನೇಕ ಮಹಿಳೆಯರು ಭಾಗವಹಿಸಿ ಸದುಪಯೋಗ ಪಡೆದುಕೊಂಡರು.

## "ಆರ್ಬಿಟ್ ಸಂಸ್ಥೆಯ ಸಹಯೋಗದಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ"



ಏಪ್ರಿಲ್ 30 ರಂದು ಚಿಟ್ಗುಪ್ಪ ತಾಲೂಕಿನ ಇಟ್ಗಾ ಕೇಂದ್ರದಲ್ಲಿ ಕಾರಿತಾಸ್ ಹಾಗೂ ಆರ್ಬಿಟ್ ಸಂಸ್ಥೆಯ ಸಹಯೋಗದಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿಯ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ವಂದನೀಯ ಫಾದರ್ ವಿಕ್ಟರ್ ಅನಿಲ್ ವಾಸ್ ನಿರ್ದೇಶಕರು ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಇವರು ಮಾತನಾಡಿದರು. ದಾನಿಗಳಿಂದ ಸಹಾಯ ಪಡೆಯುತ್ತಿರುವ ಮಕ್ಕಳ ಪೋಷಕರಾದ ನೀವೆಲ್ಲರೂ ವಿವಿಧ ಕೌಶಲ್ಯ ತರಬೇತಿಗಳಾದ ಟೈಲರಿಂಗ್,



ಬ್ಯೂಟಿಷಿಯನ್, ಡ್ರೈವಿಂಗ್ ಇವುಗಳನ್ನು ಕಲಿತುಕೊಂಡು ನಿಮ್ಮ ಕುಟುಂಬದ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಿ ಎಂದು ಕರೆ ನಿಡಿದರು. ಇಂತಹ ಕೌಶಲ್ಯಗಳು ಬೆಳೆಸಿಕೊಂಡರೆ ಆರ್ಥಿಕ ಸ್ಥಿತಿ ಸುಧಾರಿಸಿಕೊಳ್ಳುವುದರ ಜೊತೆಗೆ ನಿಮ್ಮ ಮಕ್ಕಳ ಶಿಕ್ಷಣವನ್ನು ಉನ್ನತ ಸ್ಥಿತಿಗೆ ತಲುಪಿಸಲು ಸಾಧ್ಯವಾಗುತ್ತದೆ ಹಾಗಾಗಿ ಈ ಕೌಶಲ್ಯ ಅಭಿವೃದ್ಧಿ ತರಬೇತಿಯ ಲಾಭವನ್ನು ಪಡೆದುಕೊಳ್ಳುವಂತೆ ಪೋಷಕರಿಗೆ ತಿಳಿಸಿದರು. ಈ ಉದ್ಘಾಟನಾ ಕಾರ್ಯಕ್ರಮದಲ್ಲಿ 45 ಪೋಷಕರು ಭಾಗವಹಿಸಿ, ಕೌಶಲ್ಯ ಪಡೆದುಕೊಳ್ಳುವುದರಿಂದ ಸ್ವಾವಲಂಬಿಗಳಾಗಿ ಜೀವನ ನಡೆಸಬಹುದು ಎಂಬುದರ ಕುರಿತು ಮಾಹಿತಿ ಪಡೆದುಕೊಂಡರು.



## ಆರ್ಬಿಟ್ ಸಂಸ್ಥೆ ಹಾಗೂ ಗ್ರಾಮೀಣ ಕೂಲಿಕಾರ್ಮಿಕ ಸಂಘಟನೆಯ ಸಂಯುಕ್ತಶ್ರಯದಲ್ಲಿ 'ವಿಶ್ವ ಕಾರ್ಮಿಕ ದಿನ' ಆಚರಣೆ.



ಮೇ 1 2024 ರಂದು ಸೀತಾಳಗೇರಾ ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ವಿಶ್ವ ಕಾರ್ಮಿಕ ದಿನಾಚರಣೆಯನ್ನು ಆಚರಿಸಲಾಯಿತು.ಕಾರ್ಯಕ್ರಮದಲ್ಲಿ ಪಂಚಾಯಿತಿಯ ಕಿರಿಯ ಅಭಿಯಂತರರಾದ ಶ್ರೀ ಸುನಿಲ್ ಅವರು ಮಾತನಾಡಿ ಕಾರ್ಮಿಕರು ತಮ್ಮ ಹಕ್ಕುಗಳನ್ನು ಅರಿಯುವುದು ತುಂಬಾ ಮುಖ್ಯ, ಕೆಲಸದ ಸ್ಥಳಗಳಲ್ಲಿ ಸುರಕ್ಷತೆಗೆ ಹೆಚ್ಚಿನ ಗಮನ ನೀಡಿ ಕೆಲಸ ಮಾಡಬೇಕು, ಸರಕಾರದಿಂದ ಸಿಗುವ ಸೌಲಭ್ಯಗಳ ಪ್ರಯೋಜನ ಪಡೆಯಬೇಕೆಂದು ಕರೆ ನೀಡಿದರು.ಆರ್ಬಿಟ್ ಸಂಸ್ಥೆಯ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆಯಾದ ಶ್ರೀಮತಿ ರಿಟಾ ಭಾಗವಹಿಸಿ ಮಾತನಾಡಿದರು.ವಿಶ್ವ ಕಾರ್ಮಿಕ ದಿನಾಚರಣೆಯ ಶುಭಾಶಯಗಳು ತಿಳಿಸುತ್ತಾ, ಒಂದು ರಾಷ್ಟ್ರ ಅಭಿವೃದ್ಧಿ ಹೊಂದಬೇಕಾದರೆ ಕಾರ್ಮಿಕರ ಶ್ರಮ ತುಂಬಾ ಅಗತ್ಯ, ಕಾರ್ಮಿಕರು ದೇಶವನ್ನು ಮುನ್ನಡೆಸುವ ಚಕ್ರಗಳಿದ್ದಂತೆ. ಹಿಂದಿನ ಕಾಲದಲ್ಲಿ ಕಾರ್ಮಿಕರ ಮೇಲೆ ಅನೇಕ ಶೋಷಣೆಗಳು ಆಗುತ್ತಿದ್ದವು, ಅವಧಿಗೆ ಮೀರಿ ದುಡಿಸಿಕೊಳ್ಳುವ ಪದ್ಧತಿ ಹಿಂದಿನ ಕಾಲದಲ್ಲಿ ಇತ್ತು ಆದರೆ ಇಂದು ಕಾರ್ಮಿಕರ ಪರವಾಗಿರುವ ಅನೇಕ ಕಾಯಿದೆಗಳು ಜಾರಿಯಲ್ಲಿದ್ದು ಕಾರ್ಮಿಕರ ಯೋಗ ಕ್ಷೇಮದ ನಿಟ್ಟಿನಲ್ಲಿ ತುಂಬಾ ಮಹತ್ವ ಬಂದಿದೆ, ಪ್ರತಿಯೊಬ್ಬ ದೇಶದ ಪ್ರಜೆಯು ಕಾರ್ಮಿಕ ಕಾಯಿದೆಯ ಅರಿವು ಹೊಂದುವುದು ತುಂಬಾ ಅಗತ್ಯ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕೇಕ್ ಕತ್ತರಿಸಿ ಸಿಹಿ ಹಂಚುವ ಮೂಲಕ ಪರಸ್ಪರ ಶುಭ ಕೋರಿ ಅದ್ದೂರಿಯಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಗ್ರಾಮೀಣ ಕೂಲಿ ಕಾರ್ಮಿಕ ಸಂಘಟನೆಯ ತಾಲೂಕ ಸಂಯೋಜಕೀಯಾದ ಶ್ರೀಮತಿ ಸುರೇಖಾ, ಸಿತಾಳ್ಗೆರ ಗ್ರಾಮ ಪಂಚಾಯಿತಿಯ ಕಿರಿಯ ಅಭಿಯಂತರಾದ ಶ್ರೀ ಸುನಿಲ್ ಹಾಗೂ ಸಿಬ್ಬಂದಿ ವರ್ಗ, ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯ ಕೂಲಿ ಕಾರ್ಮಿಕರು ಸೇರಿ ಒಟ್ಟು 42 ಜನ ಉಪಸ್ಥಿತರಿದ್ದರು ಹಾಗೂ ಆರ್ಬಿಟ್ ಸಂಸ್ಥೆಯ ಮಹಿಳಾ ಅಭಿವೃದ್ಧಿ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಅಮಿತಾ ರವರು ಭಾಗವಹಿಸಿ ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯುವಂತೆ ಸಹಕಾರ ನೀಡಿದರು.



## "ಸಂತ ಪೌಲರ ಪುರುಷ ಸ್ವ- ಸಹಾಯ ಸಂಘ ರಚನೆ"



ಮೇ 30.2024ರಂದು ಓತಗಿ ಹಳ್ಳಿಯ ಸಂತ ಪೌಲರ ಕಥೋಲಿಕ ದೇವಾಲಯದಲ್ಲಿ, ಪುರುಷರ ಸ್ವಸಹಾಯ ಸಂಘವನ್ನು ರಚಿಸಿ ಉದ್ಘಾಟಿಸಲಾಯಿತು. ಕಾಲ ಕಳೆದಂತೆ ವರ್ಷಗಳು ಮುಗಿದಂತೆ ಪುರುಷನು ಅಭಿವೃದ್ಧಿಯತ್ತ ಸಾಗುತ್ತಿದ್ದಾನೋ ಅಥವಾ ಸುಮ್ಮನೆ ತನ್ನ ಜೀವನವನ್ನು ಸವೆಸುತ್ತಿದ್ದಾನೋ ಎಂಬುದನ್ನು ಕುರಿತು ಚಿಂತಿಸಿ ಚರ್ಚಿಸಲಾಯಿತು. ಪಟ್ಟಣಗಳಲ್ಲಿ ಜನರು ಒಳ್ಳೆಯ ಕಂಪನಿಗಳಲ್ಲಿ ಕಷ್ಟಪಟ್ಟು ದುಡಿದು ಜೀವನ ಸಾಗಿಸುತ್ತಿದ್ದಾರೆ, ಆದರೆ ಹಳ್ಳಿಗಳಲ್ಲಾದರೂ ಜನರು ವ್ಯವಸಾಯವನ್ನೇ ನಂಬಿ ಬದುಕುತ್ತಿದ್ದಾರೆ. ಅವರಿಗೂ ಸಹ ಅಭಿವೃದ್ಧಿ ಕಾಣಲು ಆಸೆ ಇದೆ, ಅವರ ಜೀವನದಲ್ಲೂ ಮುಂದೆ ಬರುವ ಛಲವಿದೆ. ಆ ಛಲವನ್ನು, ಅವರ ಆಸೆಯನ್ನು, ಅವರ ಕುಟುಂಬವನ್ನು ಹಾಗೂ ಅವರ ಭವಿಷ್ಯವನ್ನು, ರೂಪಿಸುವುದೇ ಹಾಗೂ ಅಭಿವೃದ್ಧಿಯತ್ತ ಮತ್ತು ಸಮೃದ್ಧಿಯತ್ತ ಸಾಗಿಸುವುದೇ ಈ ಸಂಘದ ಉದ್ದೇಶವಾಗಿರುತ್ತದೆ, ಈ ಉದ್ಘಾಟನಾ ಕಾರ್ಯಕ್ರಮಲ್ಲಿ ಸುಮಾರು 15



ಜನರು ಪಾಲ್ಗೊಂಡರು. ಅಂತೆಯೇ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ವಂದನೀಯ ಗುರುಗಳಾದ ವಿಜಯ್, ಸೇವಾದರ್ಶಿ ರೊನಾಲ್ಡ್, ಮಹಿಳಾ ಸಬಲೀಕರಣದ ಕಾರ್ಯಕರ್ತೆಯಾದ ಕಲ್ಪನಾ ಹಾಗೂ ಓತಗಿ ಗ್ರಾಮದ ಗಣ್ಯ ವ್ಯಕ್ತಿಗಳು ಭಾಗವಹಿಸಿ ಈ ಪುರುಷ ಸ್ವ-ಸಹಾಯ ಸಂಘದ ಸ್ಥಾಪನೆಗಾಗಿ ತಮ್ಮ ಹರ್ಷವನ್ನು ವ್ಯಕ್ತಪಡಿಸುತ್ತಾ ಮುಂದಿನ ದಿನಗಳಲ್ಲಿ ಸಂಘವು ಉತ್ತಮ ಅಭಿವೃದ್ಧಿಯನ್ನು ಕಾಣಲೆಂದು ಅರಸಿ ಹಾರೈಸಿದರು.

## ಸಂತ ಯೋವನ ಪುರುಷರ ಸ್ವ- ಸಹಾಯ ಸಂಘದ ಉದ್ಘಾಟನಾ ಸಮಾರಂಭ ಚಳಕಾಪುರ.



ಪ್ರಿಯರೇ, ಮೇ20.2024 ರಂದು ಸಂಜೆ ಸುಮಾರು 8 ಗಂಟೆಗೆ ಬೀದರ್ ಜಿಲ್ಲೆಯ ಬಾಲ್ಕಿ ತಾಲೂಕಿನ ಚಳಕಾಪುರ ಗ್ರಾಮದ ಸಂತ ಯೋವಾನರ ಕಥೋಲಿಕ ದೇವಾಲಯದಲ್ಲಿ ಪುರುಷರ ಸ್ವ-ಸಹಾಯ ಸಂಘವನ್ನು ಉದ್ಘಾಟಿಸಲಾಯಿತು. ಈ ಸಮಾರಂಭಕ್ಕೆ ಸುಮಾರು 20 ಜನ ಪುರುಷರು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದರು. ಸ್ವ-ಸಹಾಯ ಸಂಘಗಳಿಂದ ಮಹಿಳೆಯರಲ್ಲಿ ಆದ ಬದಲಾವಣೆ, ಏಳಿಗೆ, ಅಭಿವೃದ್ಧಿಯನ್ನು, ಅರಿತುಕೊಂಡ ಪುರುಷರು ನಾವು ಸಹ ಸಮಾಜದಲ್ಲಿ ಬೆಳೆಯಬೇಕು, ಅಭಿವೃದ್ಧಿ ಹೊಂದಬೇಕು, ಅಂತೆಯೇ ನಮ್ಮ ಈ ಚಿಕ್ಕ ಉಳಿತಾಯವು ನಮ್ಮ ಕುಟುಂಬದ, ನಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುವ ನಿಧಿಯಾಗಿ ಮಾರ್ಪಾಡಲಿ ಎಂಬ ಆಶಯವನ್ನು ವ್ಯಕ್ತಪಡಿಸಿದರು . ಈ ಉದ್ಘಾಟನಾ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ವಂದನೀಯ ಗುರುಗಳಾದ ವಿಜಯ್ ರವರು ಪಾಲ್ಗೊಂಡು, ಜನರನ್ನು ತಮ್ಮ ಮಾತಿನ ಮೂಲಕ ಹುರಿದುಂಬಿಸಿದರು. ಅಂತಯೇ ಈ ಸಂಘದ ಕಾರ್ಯಕರ್ತರಾಗಿ ಸೇವಾ ದರ್ಶಿ ಬ್ರದರ್ ಫ್ರಾನ್ಸಿಸ್ ರವರು ಈ ಸಂಘದ ಉದ್ಘಾಟನಾ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ದುಡಿಯೋಣ, ಗಳಿಸೋಣ, ಗಳಿಸಿದರಲ್ಲಿ, ಸ್ವಲ್ಪ ಹಣವನ್ನು ಉಳಿತಾಯ ಮಾಡೋಣ.... ಎಂಬ ಧ್ಯೇಯ ವಾಕ್ಯದೊಂದಿಗೆ ಪುರುಷರ ಸ್ವಸಹಾಯ ಸಂಘವನ್ನು ಪ್ರಾರಂಭಿಸಲಾಯಿತು.





# “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

## “ವಿಶೇಷ ವಿಕಲಚೇತನ ಮಕ್ಕಳಿಗೆ ಚಟುವಟಿಕೆ”



ಮೇ 9.2024 ರಂದು ಬಸವಕಲ್ಯಾಣ ತಾಲೂಕಿನ ಹಣಮಂತವಾಡಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕವಿತಾ ‘ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ’ ಕಾರ್ಯಕ್ರಮದ ಬಗ್ಗೆ ಗ್ರಾಮದ ಜನರಿಗೆ ಆರ್ಬಿಟ್ ಸಂಸ್ಥೆ ಮಾಡುತ್ತಿರುವ ಜನಪರ ಸೇವೆಗಳ ಕುರಿತು ಮಾಹಿತಿ ನೀಡಿದರು. ವಿಶೇಷ ವಿಕಲಚೇತನ ಮಕ್ಕಳಿಗೆ ಚಟುವಟಿಕೆ ಮಾಡಿಸುವುದರಿಂದ ಬದಲಾವಣೆ ಹೊಂದುತ್ತಾರೆ ಹಾಗೂ ಸರಕಾರದಿಂದ ಸಿಗುವಂತಹ ಸೌಲಭ್ಯಗಳಾದ ನಿರಾಮಯ ಕಾರ್ಡ್, ಯು.ಡಿ.ಐ.ಡಿ ಕಾರ್ಡ್ ಬಗ್ಗೆ ಮಾಹಿತಿ ನೀಡಲಾಯಿತು. ವಿಶೇಷ ವಿಕಲಚೇತನರೂ ಯಾವುದರಲ್ಲಿಯೂ ಕಡಿಮೆ ಇಲ್ಲ, ಅವರಿಗೆ ಕೀಳಾಗಿ ಕಾಣಬೇಡಿ, ಅವರು ಮನಸ್ಸು ಮಾಡಿದರೆ ಯಾವುದೇ ಕ್ಷೇತ್ರದಲ್ಲಿಯೂ ಉತ್ತಮ ಸಾಧನೆಯನ್ನು ಮಾಡಬಹುದು. ಅಂತಹ ಮಕ್ಕಳು ಕಂಡು ಬಂದರೆ ಆರ್ಬಿಟ್ ಸಂಸ್ಥೆಗೆ ಕರೆ ಮಾಡಿ ಮಾಹಿತಿ ನೀಡುವಂತೆ ಕೋರಿದರು. ಸಂಪನ್ಮೂಲ ವ್ಯಕ್ತಿಯಾಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ಅಧಿಕಾರಿಯಾಗಿರುವಂತ ಶ್ರೀಮತಿ ಕಾವೇರಿ ಅವರು ಈ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಗ್ರಾಮದ ಮಹಿಳೆಯರಿಗೆ ಪೌಷ್ಟಿಕ ಆಹಾರದ ಬಗ್ಗೆ ಮತ್ತು ಗರ್ಭಿಣಿ ಸ್ತ್ರೀಯರು ಯಾವ ತರಕಾರಿಗಳನ್ನು ಸೇವನೆ ಮಾಡಬೇಕೆನ್ನುವುದರ ಬಗ್ಗೆ ಮಾಹಿತಿಯನ್ನು ನೀಡಿದರು. ಆರ್ಬಿಟ್ ಸಂಸ್ಥೆಯು ಕ್ಷೇತ್ರದಲ್ಲಿ ಉತ್ತಮವಾದ ಸಮಾಜ ಸೇವೆ ಮಾಡುತ್ತಿದೆ ಸಾರ್ವಜನಿಕರು ಸಂಸ್ಥೆಯ ಕಾರ್ಯಕರ್ತರಿಗೆ ಸಹಕಾರ ನೀಡುವಂತೆ ಅವರು ಮನವಿ ಮಾಡಿದರು. ಈ ಕಾರ್ಯಕ್ರಮದಲ್ಲಿ 20 ಜನ ಆಶಾ ಕಾರ್ಯಕರ್ತೆಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಅಸೆಸ್ಮೆಂಟ ಮತ್ತು ಥೆರಪಿ”



ಮೇ 18.2024 ರಂದು ಹುಮ್ನಾಬಾದ್ ತಾಲೂಕಿನ ಹಿಲಾಲ್ಪುರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ” ಕಾರ್ಯಕರ್ತೆಯಾದ ಶ್ರೀಮತಿ ಮಮತಾ ರವರು 0–8 ವರ್ಷದ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಕುಂದು ಕೊರತೆಗಳ ಕುರಿತು ಮಾಹಿತಿ ನೀಡಿದರು. ಆರ್ಬಿಟ್ ಸಂಸ್ಥೆಯಲ್ಲಿ ನೀಡುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಮತ್ತು ವಿಶೇಷ ವಿಕಲಚೇತನರಿಗೆ ಯಾವ ರೀತಿಯಾಗಿ ಅಸೆಸ್ಮೆಂಟ್ ಮತ್ತು ಥೆರಪಿ ನೀಡುತ್ತೇವೆ ಎಂಬುದರ ಕುರಿತು ಸವಿಸ್ತಾರವಾಗಿ ತಿಳಿಸಲಾಯಿತು. ಯಡಿಐಡಿ ಹಾಗೂ ನಿರಾಮಾಯ ಕಾರ್ಡ್ ಸೌಲಭ್ಯಗಳ ಕುರಿತು ಮಾಹಿತಿ ನೀಡಿ, ನಿಮ್ಮ ಮಕ್ಕಳು ನಮ್ಮ ಸಂಸ್ಥೆಗೆ ಬಂದು ಎಷ್ಟು ಬದಲಾವಣೆಗಳನ್ನು ಕಂಡಿದ್ದಾರೆ ಎಂದು ಪೋಷಕರ ಅಭಿಪ್ರಾಯ ಕೇಳಿದಾಗ, ಪೋಷಕರು ಆರ್ಬಿಟ್ ಸಂಸ್ಥೆ ನಮಗೆ ತುಂಬಾ ವಿಧದಲ್ಲಿ ಸಹಾಯ ಮಾಡಿದೆ, ನಮ್ಮ ಮಕ್ಕಳು ಆರೋಗ್ಯಯದಲ್ಲಿ ಸುಧಾರಣೆ ಕಂಡು ಬಂದಿದೆ ಎಂದು ಸಂತೋಷ ವ್ಯಕ್ತಪಡಿಸಿದರು.

## “ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಅಂಗವಿಕಲತೆ ಆರೋಗ್ಯ ತೊಂದರೆ”



ಮೇ 6.2024 ರಂದು ಹುಮ್ನಾಬಾದ್ ತಾಲೂಕಿನ ಘಾಟ್‌ಬೋರಾಳ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚಿವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆಯ ಕುರಿತು ಅರಿವಿನ ಕಾರ್ಯಕ್ರಮವನ್ನು ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ್ ಅವರು ಹಮ್ಮಿಕೊಂಡಿದ್ದರು. ಶೀಘ್ರ ಮಧ್ಯಸ್ಥಿಕೆ ಶಿಶುಗಳಿಗೆ, ಮಕ್ಕಳಿಗೆ ಮತ್ತು ಅವರ ಕುಟುಂಬದವರಿಗೆ ಅಗತ್ಯವಾದ ಸೇವೆಗಳ ಮತ್ತು ಬೆಂಬಲವನ್ನು ಒದಗಿಸುವ ಪ್ರಮುಖ ಪ್ರಕ್ರಿಯೆಯಾಗಿದೆ. ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಅಂಗವಿಕಲತೆ, ಆರೋಗ್ಯ ತೊಂದರೆ, ಅಸಾಮಾನ್ಯ ಬೆಳವಣಿಗೆ ಮತ್ತು ಕಲಿಕೆಗಳ ಮೇಲೆ ಪರಿಣಾಮ ಬೀರಬಹುದು. ಅಂಗವಿಕಲತೆಯ ಪರಿಣಾಮಗಳನ್ನು ಕಡಿಮೆ ಮಾಡುವ ಸಲುವಾಗಿ ಎಂಟು ಪ್ರಮುಖ ಬೆಳವಣಿಗೆಯ ಹಂತಗಳು ಮತ್ತು 14 ಬೆಳವಣಿಗೆ ಕ್ಷೇತ್ರಗಳಲ್ಲಿನ ಸಮಸ್ಯೆಗಳನ್ನು ಚಿಕ್ಕ ವಯಸ್ಸಿನಲ್ಲೇ ಗುರುತಿಸಿ ಅಂಗವಿಕಲತೆ ಮತ್ತು ಬೆಳವಣಿಗೆಗೆ ಕುಂಠಿತವನು ಕಡಿಮೆ ಮಾಡಬಹುದು ಎಂದು ಯೋಜನೆಯ ಕುರಿತು ಸಂಪೂರ್ಣ ಮಾಹಿತಿ ತಿಳಿಸಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ 20 ಜನ ಭಾಗವಹಿಸಿ ಮಾಹಿತಿ ಪಡೆದುಕೊಂಡರು

# ಯಶಸ್ವಿನ ಕಥೆ



**ಮಗುವಿನ ಹೆಸರು: ಕಾರ್ತಿಕ್.**
**ತಂದೆ ಹೆಸರು: ರಘುನಾಥ್**
**ತಾಯಿಯ ಹೆಸರು: ಅಂಬಿಕ.**
**ಮಗುವಿನ ವಯಸ್ಸು: 25/12/2020**
**ಗ್ರಾಮ: ಹಣ್ ಕುಣಿ.**
**ವಿಕಲತೆ: ನಡೆಯುವ ಸಮಸ್ಯೆ**
**ನೊಂದಣಿ ಸಂಖ್ಯೆ:**

**ಕುಟುಂಬದ ಹಿನ್ನೆಲೆ:–** ಕಾರ್ತಿಕ 5 ವರ್ಷದ ಮಗುವಾಗಿದ್ದು, ತಂದೆ ಕೂಲಿ ಕೆಲಸವನ್ನು ಮಾಡುತ್ತಾರೆ, ತಾಯಿ ಗ್ರಹಣೆಯಾಗಿದ್ದು, ಮಗುವಿನ ಮನೆಯಲ್ಲಿ ಒಟ್ಟು ಎಂಟು ಜನ ಸದಸ್ಯರಿದ್ದಾರೆ ಇವರಿಗೆ ಕಾರ್ತಿಕ್ ಮೊದಲನೇ ಮಗನಾಗಿದ್ದು ಒಬ್ಬಳು ತಂಗಿ ಇದ್ದಾಳೆ.
**ಮಗುವಿನ ಮೂಲ ಸಮಸ್ಯೆ:–** ಮಗುವಿಗೆ ಮಾತಿನ ಸಮಸ್ಯೆ ಮತ್ತು ನಡೆಯುವುದಕ್ಕೆ ಆಗುವುದಿಲ್ಲ.

**ಮಾರ್ಗದರ್ಶನ:–** ಆರ್ಬಿಟ ಸಂಸ್ಥೆ ವತಿಯಿಂದ ಕಾರ್ಯಕರ್ತರು ಮಗುವಿನ ಮನೆ ಭೇಟಿ ಮಾಡಿ ಮಗುವಿನ ಸಮಸ್ಯೆಯನ್ನು ತಿಳಿದುಕೊಳ್ಳಲಾಯಿತು. ಅವರಿಗೆ ನಮ್ಮ ಸಂಸ್ಥೆಯಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳೊಂದಿಗೆ ನಾವು ಕಾರ್ಯವನ್ನ ನಿರ್ವಹಿಸುತ್ತಿದ್ದೇವೆ ಎಂದು ತಿಳಿಸಲಾಯಿತು. ನಿಮ್ಮ ಮಗುವಿಗೆ ಚಟುವಟಿಕೆ ಮುಖಾಂತರ ಬದಲಾವಣೆ ತರಬಹುದೆಂದು ಮನವರಿಗೆ ಮಾಡಿಕೊಡಲಾಯಿತು.

**ಮಗುವಿನಲ್ಲಾದ ಬದಲಾವಣೆ:–** ಕಾರ್ಯಕರ್ತರ ಸತತ ಪ್ರಯತ್ನ ಹಾಗೂ ಮನೆ ಭೇಟಿಯಿಂದ. ಮಗುವಿಗೆ ಹಲವಾರು ಚಟುವಟಿಕೆ ಮಾಡಿಸಿದ್ದರ ಫಲವಾಗಿ ಸದ್ಯ ಭಾಗಶಹ ಕುಳಿತುಕೊಳ್ಳುತ್ತಿದ್ದಾನೆ ಹಾಗೂ ವಸ್ತುಗಳನ್ನು ಹಿಡಿದುಕೊಂಡು ಶೇಕಡಾ 50 ಪ್ರತಿಶತ ನಿಲ್ಲುತ್ತಿದ್ದಾನೆ. ಮಗುವಿನಲ್ಲಿ ಈ ಬದಲಾವಣೆ ಕಂಡ ಪೋಷಕರು ಆರ್ಬಿಟ್ ಸಂಸ್ಥೆಗೆ ಮತ್ತು ಎಪಿಡಿ ಸಂಸ್ಥೆಗೆ ಧನ್ಯವಾದಗಳು ತಿಳಿಸಿದ್ದಾರೆ.

## "ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ"

### "ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮ"



ಮೇ 09.2024 ರಂದು, ಬಸವಕಲ್ಯಾಣ ತಾಲೂಕಿನ ಸುಂತನ ಗ್ರಾಮದ 'ನರೇಗಾ ಯೋಜನೆ' ಅಡಿಯಲ್ಲಿ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕರಿಗೆ ಆರ್ಬಿಟ್ ಸಂಸ್ಥೆ ಹಾಗೂ ಎಲ್ ಎಲ್ ಎಲ್ ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ, ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಜಯಕುಮಾರ ಅವರು ಜನರನ್ನು ಉದ್ದೇಶಿಸಿ ಮಾತನಾಡಿದರು. ಮಾನಸಿಕ ಅಸ್ವಸ್ಥತೆ, ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು, ಕಾಯಿಲೆಗೆ ಕಾರಣ ಹಾಗೂ ಮಾನಸಿಕ ಅಸ್ವಸ್ಥತೆಗೆ ಇರುವ ಉಪಚಾರದ ಕುರಿತು ತಿಳಿಸಿದರು. ತಮ್ಮ ಪ್ರದೇಶದಲ್ಲಿ ಮಾನಸಿಕ ಅಸ್ವಸ್ಥರು ಕಂಡುಬಂದಲ್ಲಿ ಸಂಸ್ಥೆಯ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡುವ ಮೂಲಕ ಸೂಕ್ತ ಮಾರ್ಗದರ್ಶನ ಪಡೆಯಬಹುದು ಎಂದು ತಿಳಿಸಿದರು. ಪಂಚಾಯತ್ ರಾಜ್ ಇಲಾಖೆಯಲ್ಲಿರುವ ವಿವಿಧ ಸೌಲಭ್ಯಗಳ ಮಾಹಿತಿ ನೀಡಿದರು. ಕ್ಯಾನ್ಸರ್ ರೋಗದ ಬಗ್ಗೆ ಅರಿವು ಮೂಡಿಸಿ, ಧೂಮಪಾನ ಮತ್ತು ಮದ್ಯಪಾನದಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 24 ಜನರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.



ಮೇ 24.2024 ರಂದು ಬಸವಕಲ್ಯಾಣ ತಾಲೂಕಿನ ಸಸ್ತಪೂರ್ ಗ್ರಾಮದ ಮಾನಸಿಕ ಅಸ್ವಸ್ಥರ ಪಾಲಕ ಪೋಷಕರಿಗೆ, ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಎಲ್ಎಲ್ಎಲ್ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಮಾಹಿತಿ ನೀಡಿದ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ಸುಜಾತ, ಕ್ಯಾನ್ಸರ್ ಹೇಗೆ ಬರುತ್ತದೆ? ಎಂದು ವಿವರವಾಗಿ ತಿಳಿ ಹೇಳಿದರು, ತಂಬಾಕು ಸೇವನೆಯಿಂದ ಬಾಯಿ ಹಾಗೂ ಗಂಟಲಿನ ಕ್ಯಾನ್ಸರ್ ಬರಬಹುದು, ಧೂಮಪಾನ ಮಾಡುವುದರಿಂದ ಶ್ವಾಸಕೋಶದ ಕ್ಯಾನ್ಸರ್ ಬರುವ ಸಾಧ್ಯತೆ ಅಧಿಕವಾಗಿದೆ, ಹೆಣ್ಣು ಮಕ್ಕಳು ಮುಟ್ಟಾದ ಸಮಯದಲ್ಲಿ ಬಟ್ಟೆಗಳನ್ನು ಸ್ವಚ್ಛವಾಗಿ ಇಡದೆ ಹೋದರೆ ಸೋಂಕಿನಿಂದಾಗಿ ಕ್ಯಾನ್ಸರ್ ಬರಬಹುದು ಆದ್ದುದರಿಂದ ಸ್ತ್ರೀಯರು ವೈಯಕ್ತಿಕ ಶುಚಿತ್ವದ ಕಡೆಗೆ ಹೆಚ್ಚಿನ ಗಮನ ನೀಡಬೇಕು, ಅದೇ ರೀತಿ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಅಧಿಕವಾಗಿ ಕಂಡು ಬರುತ್ತಿರುವುದರಿಂದ ಗೆಡ್ಡೆ ರೀತಿಯ ನೋವಿನ ಅನುಭವವಾದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಸಲಹೆ ಪಡೆಯಬೇಕು. ಹೀಗೆ ನಾವು ನಮ್ಮ ಆರೋಗ್ಯದ ಕಡೆ ಹೆಚ್ಚು ಗಮನ ಕೊಡಬೇಕು ಎಂದು ತಿಳಿಸಿದರು. ಈ ಅರಿವಿನ ಕಾರ್ಯಕ್ರಮದಲ್ಲಿ ಗ್ರಾಮದ ಜನರು ಬಹು ಸಂಖ್ಯೆಯಲ್ಲಿ ಭಾಗವಹಿಸುವುದರ ಮೂಲಕ ಮಾಹಿತಿಯನ್ನು ಪಡೆದುಕೊಂಡರು.

## “ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮ”



ಮೇ 22.2024 ರಂದು ಬಸವಕಲ್ಯಾಣ ತಾಲೂಕಿನ ನಾರಾಯಣಪುರ ಗ್ರಾಮದ ಮಾನಸಿಕ ಅಸ್ವಸ್ಥರ ಪಾಲಕ ಪೋಷಕರಿಗೆ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆ ಹಾಗೂ ನವ ಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ಜರುಗಿತು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ಸುಜಾತ ಮಾತನಾಡಿದರು, ಕ್ಯಾನ್ಸರ್ ಉಂಟಾಗಲು ಕಾರಣ, ಕಾಯಿಲೆಯ ವಿಧಗಳು, ಹಾಗೂ ಸೂಕ್ತ ಚಿಕಿತ್ಸೆಯ ಕುರಿತು ಸವಿವರವಾಗಿ ತಿಳಿಸಿದರು. ಕ್ಯಾನ್ಸರ್ ರೋಗವನ್ನು ಪೂರ್ವದಲ್ಲಿಯೇ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡುವ ಮೂಲಕ ಯಶಸ್ವಿಯಾಗಿ ತಡೆಗಟ್ಟಬಹುದು ಎಂದು ಮಾಹಿತಿ ನೀಡಲಾಯಿತು. ಧೂಮಪಾನ, ಮದ್ಯಪಾನ, ತಂಬಾಕು, ಗುಟಕಾ ಇಂತಹ ದುಶ್ಚಟಗಳಿಂದ ದೂರ ಇರುವುದರಿಂದ ಆರೋಗ್ಯಯುತ ಜೀವನ ನಡೆಸಬಹುದು ಎಂದು ತಿಳಿಸಿದರು. ದೇಹದಲ್ಲಿ ಸಣ್ಣ ಪುಟ್ಟ ಗೆಟ್ಟೆಗಳು ಕಂಡು ಬಂದರೆ, ತಕ್ಷಣ ವೈದ್ಯರಿಂದ ತಪಾಸಣೆ ಮಾಡಿಸಿಕೊಳ್ಳಬೇಕು, ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದರ ಮೂಲಕ ಆರೋಗ್ಯದಲ್ಲಿ ಆಗುವಂಥ ಏರುಪೇರುಗಳನ್ನು ನಿಯಂತ್ರಿಸಬಗುದು ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಗ್ರಾಮದ ಜನರು ಬಹು ಸಂಖ್ಯೆಯಲ್ಲಿ ಭಾಗವಹಿಸುವುದರ ಮೂಲಕ ಅರಿವಿನ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

## “ಡಿ.ಎಮ್.ಎಚ್.ಪಿ ಶಿಬಿರದ ಆಪ್ತ ಸಮಾಲೋಚನೆ”



ಮೇ 21.2024 ರಂದು ಹುಮನಾಬಾದ್ ತಾಲ್ಲೂಕಿನ ಹಲ್ಲಿಖೆಡ್ ಬಿ ಸರ್ಕಾರಿ ಆಸ್ಪತ್ರೆಯಲ್ಲಿ ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರ ನಡೆಯಿತು. ಈ ಶಿಬಿರಕ್ಕೆ ಡಿ.ಎಮ್.ಎಚ್.ಪಿ ಶಿಬಿರದ ಆಪ್ತ ಸಮಾಲೋಚಕರಾದಗೆ ಪರುಶುರಾಮ ಅವರು ಆಗಮಿಸಿ 11 ಜನ ಮಾನಸಿಕ ಅಸ್ವಸ್ಥರನ್ನು ತಪಾಸಣೆ ಮಾಡಿ ಆಪ್ತ ಸಮಾಲೋಚನೆಗೆ ಒಳಪಡಿಸಿ ಉಚಿತ ಚಿಕಿತ್ಸೆ ಒದಗಿಸಿಕೊಡಲಾಯಿತು . ಈ ಶಿಬಿರದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯ ಕರ್ತರಾದ ಶ್ರೀ ಕುಮಾರ ಅವರು ಉಚಿತ ಚಿಕಿತ್ಸೆ ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

## “ಮಾನಸಿಕ ಅಸ್ವಸ್ಥತೆಯ ಕುರಿತು ಜಾಗೃತಿ ಕಾರ್ಯಕ್ರಮ”



ಮೇ 22.2024 ರಂದು ಔರಾದ್ ತಾಲೂಕಿನ ದಾಬಕ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಎಲ್.ಎಲ್.ಎಲ್ಎಫ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥತೆಯ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ನವ ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಬಬನ ರಾಠೋಡ ಆಶಾ ಕಾರ್ಯಕರ್ತೆಯರಿಗೆ ಮಾಹಿತಿ ನೀಡಿದರು. ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆ ಮತ್ತು ಮಾನಸಿಕ ಕಾಯಿಲೆಯ ಲಕ್ಷಣಗಳ ಕುರಿತು ಮಾಹಿತಿ ನೀಡಿದರು. ಆಶಾ ಕಾರ್ಯಕರ್ತೆಯರು ಸಮುದಾಯದ ತಳಮಟ್ಟದಲ್ಲಿ ಕಾರ್ಯ ನಿರ್ವಹಿಸುವುದರಿಂದ, ಸಮುದಾಯದ ಸಂಪೂರ್ಣ ಮಾಹಿತಿ ಇರುತ್ತದೆ, ಆದ್ದರಿಂದ ತಮಗೆ ಯಾರಾದರೂ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದರೆ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಿಗೆ ಮಾಹಿತಿ ನೀಡುವಂತೆ ಕೋರಲಾಯಿತು. ಈ ಜಾಗ್ರತಿ ಕಾರ್ಯಕ್ರಮದಲ್ಲಿ ಒಟ್ಟು 20 ಆಶಾ ಕಾರ್ಯಕರ್ತೆಯರು 06 ಸಿ.ಎಚ್.ಓ ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.



ಮೇ 28.2024 ರಂದು ಅಳವಾಯಿ ಗ್ರಾಮದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಆಶಾ ಕಾರ್ಯಕರ್ತೆಯರಿಗೆ ಆರ್ಬಿಟ್ ಸಂಸ್ಥೆಯ ನವ ಜೀವನ ಕಾರ್ಯಕ್ರಮದ ಎಲ್.ಎಲ್.ಎಲ್.ಎಫ್ ಫೌಂಡೇಶನ್ ಅವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥತೆ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ನವ ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅಮರ್ ರವರು ಮಾಹಿತಿ ನೀಡುತ್ತ ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆ, ಮಾನಸಿಕ ಕಾಯಿಲೆಯ ಲಕ್ಷಣಗಳು ಹಾಗೂ ಇದಕ್ಕೆ ಇರುವ ಸೂಕ್ತ ಚಿಕಿತ್ಸೆಯ ಕುರಿತು ಮಾಹಿತಿ ನೀಡಿದರು. ಈ ಜಾಗ್ರತಿ ಕಾರ್ಯಕ್ರಮದಲ್ಲಿ ಒಟ್ಟು 17 ಜನರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## “ಕ್ಯಾನ್ಸರ್ ರೋಗದ ಕುರಿತು ಜಾಗೃತಿ”



ಮೇ 8.2024 ರಂದು ಭಾಲ್ಕಿ ತಾಲೂಕಿನ ಲಂಜವಾಡ್ ಗ್ರಾಮದಲ್ಲಿ ಸ್ಥಳೀಯ ಮಹಿಳೆಯರಿಗೆ ಕ್ಯಾನ್ಸರ್ ರೋಗದ ಕುರಿತು ಮಾಹಿತಿಯನ್ನು ನೀಡಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ನವಜೀವನ ಎಲ್ಎಲ್ಎಲ್ಎಫ್ ಕಾರ್ಯಕ್ರಮದ ಕಾರ್ಯಕರ್ತೆಯಾದ ಕುಮಾರಿ ಅಶ್ವಿನಿ ಭಾಗವಹಿಸಿದರು. ಈ ಕಾರ್ಯಕ್ರಮದಲ್ಲಿ ಮಹಿಳೆಯರಲ್ಲಿ ಕಾಣಿಸಿಕೊಳ್ಳುವ ಕ್ಯಾನ್ಸರ್ ರೋಗ ಮತ್ತು ವಿಧಗಳು ಹಾಗೂ ಅವುಗಳ ಲಕ್ಷಣಗಳನ್ನು ತಿಳಿ ಹೇಳಲಾಯಿತು. ಜೊತೆಗೆ ಮಹಿಳೆಯರು ವೈಯಕ್ತಿಕ ಸ್ವಚ್ಛತೆ ಮತ್ತು ತಮ್ಮ ದೇಹದ ಬಗ್ಗೆ ಅರಿವು ಹೊಂದಿರಬೇಕು, ನಮ್ಮ ದೇಹದಲ್ಲಾಗುವ ಬದಲಾವಣೆಗಳನ್ನು ಗಮನಿಸಬೇಕು, ಹಠಾತ್ ಬದಲಾವಣೆಗಳು ಕಂಡುಬಂದಲ್ಲಿ ಕೂಡಲೇ ತಜ್ಞ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆ ಪಡೆಯಬೇಕು. ವಿಶೇಷವಾಗಿ ಮಹಿಳೆಯರು ಸ್ತನ ಕ್ಯಾನ್ಸರ್ ಕುರಿತು ಜಾಗೃತರಾಗಿ ಸ್ತನದಲ್ಲಿ ಗೆಡ್ಡೆ ಹಾಗೂ ನೋವಿನ ಅನುಭವವಾದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಬೇಕು. ಮುಂಜಾಗ್ರತಾ ಕ್ರಮ ಕೈಗೊಳ್ಳುವುದೇ ಕ್ಯಾನ್ಸರ್ ವಿರುದ್ಧ ಹೋರಾಡುವ ಪ್ರಬಲ ಅಸ್ತ್ರವಾಗಿದೆ ಎಂದು ಮಾಹಿತಿ ನೀಡಿದರು. ದುಶ್ಚಟಗಳು ಹಾಗೂ ನಶೆಯ ಪದಾರ್ಥಗಳಿಗೆ ಬಲಿಯಾಗದೆ ಉತ್ತಮ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವುದರ ಮೂಲಕ ಹಲವಾರು ರೋಗಗಳಿಂದ ದೂರವಿರಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದಿಂದ ಪಡೆದ ಪ್ರತಿಯೊಂದು ಮಾಹಿತಿಯು ನಿಮ್ಮ ಸ್ನೇಹಿತರಲ್ಲಿ, ಸಂಬಂಧಿಕರಲ್ಲಿ ಹಂಚಿಕೊಳ್ಳುವ ಮೂಲಕ ಇಂತಹ ಜಾಗೃತಿ ಅಭಿಯಾನ ಕಾರ್ಯಕ್ರಮಗಳಲ್ಲಿ ತಾವು ಸಹ ಕೈಜೋಡಿಸಬೇಕೆಂದು ಮನವಿ ಮಾಡಿದರು. ಈ ಕಾರ್ಯಕ್ರಮದಲ್ಲಿ ಗ್ರಾಮದ ಜನರು ಬಹು ಸಂಖ್ಯೆಯಲ್ಲಿ ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## “ಮಾನಸಿಕ ಅಸ್ವಸ್ಥತೆಯ ಮತ್ತು ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮ”



ಮೇ 11.2024ರಂದು ಔರಾದ್ ತಾಲ್ಲೂಕಿನ ಲಾಧ ಗ್ರಾಮದ ಹನುಮಾನ್ ಮಂದಿರದಲ್ಲಿ ಅರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮ ಎಲ್.ಎಲ್.ಎಲ್.ಎಫ್ ಸಂಯುಕ್ತ ಆಶ್ರಯದಲ್ಲಿ, ಮಾನಸಿಕ ಅಸ್ವಸ್ಥರ ಕುರಿತು ಮತ್ತು ಕ್ಯಾನ್ಸರ್ ಕುರಿತು ಜಾಗ್ರತಿ ಕಾರ್ಯಕ್ರಮ ನೀಡಲಾಯಿತು. ಈ ಕಾರ್ಯಕ್ರಮದಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಯೋಹನ ಉಪಸ್ಥಿತರಿದ್ದರು. ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆ, ಮಾನಸಿಕ ಕಾಯಿಲೆಯ ಗುಣಲಕ್ಷಣಗಳು, ಮಾನಸಿಕ ಖಾಯಿಲೆಗೆ ಸಂಬಂಧಿಸಿದ ಚಿಕಿತ್ಸೆಯ ಬಗ್ಗೆ ವಿವರಿಸಿದರು ಹಾಗೂ ಕ್ಯಾನ್ಸರ್ ಕಾಯಿಲೆಯು ಅಧಿಕವಾಗಿ ಸಾರಾಯಿ, ತಂಬಾಕು ಸೇವನೆ, ಬೀಡಿ ಸಿಗರೇಟು ಸೇದುವುದರಿಂದ ಈ ರೋಗವು ಬರುತ್ತದೆ ಎಂದು ತಿಳಿಸಿದರು. ಕ್ಯಾನ್ಸರ್ ರೋಗದ ಕುರಿತು ಪೂರ್ವದಲ್ಲಿಯೇ ತಪಾಸಣೆ ಮಾಡಿಸಿಕೊಂಡಲ್ಲಿ ಯಶಸ್ವಿಯಾಗಿ ಎದುರಿಸಬಹುದು ಎಂದು ನೆರೆದ ಗ್ರಾಮಸ್ಥರಿಗೆ ಮನವರಿಗೆ ಮಾಡಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಗ್ರಾಮದ ಜನರು ಬಹು ಸಂಖ್ಯೆಯಲ್ಲಿ ಪಾಲ್ಗೊಳ್ಳುವುದರ ಮೂಲಕ ಮಾಹಿತಿಯನ್ನು ಪಡೆದುಕೊಂಡರು.



ಮೇ 21.2024 ರಂದು ಬೀರಿ (ಕೆ) ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ನವಜೀವನದ ಎಲ್.ಎಲ್.ಎಲ್.ಎಫ್ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರಾದ ಲೋಹೇಶ ರವರಿಂದ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆ, ಮಾನಸಿಕ ಕಾಯಿಲೆಯ ಲಕ್ಷಣಗಳು ಹಾಗೂ ಇದಕ್ಕೆ ಇರುವ ಸೂಕ್ತ ಚಿಕಿತ್ಸೆಯ ಕುರಿತು ಮಾಹಿತಿ ನೀಡಿದರು. ಈ ಜಾಗ್ರತಿ ಕಾರ್ಯಕ್ರಮದಲ್ಲಿ 10 ಜನರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## "ಆರ್ಬಿಟ್ ಸಂಸ್ಥೆಯ ಸಹಯೋಗದಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ"



04/06/2024 ರಂದು ಸೈಂಟ್ ಮದರ್ ತೆರೇಸಾ ಶಿಕ್ಷಣ ಸಂಸ್ಥೆ ನಾಗಮಾರಪಳ್ಳಿಯಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಇವರ ಆಶ್ರಯದಲ್ಲಿ ಎರಡು ತಿಂಗಳ ಟೈಲರಿಂಗ್ ತರಬೇತಿ ಆಯೋಜಿಸಲಾಯಿತು. ಗ್ರಾಮ ಪಂಚಾಯತ್ ಸದಸ್ಯರಾದ ಶ್ರೀಮತಿ ಮಹಾದೇವಿ ಹಾಗೂ ಆರ್ಬಿಟ್ ಸಂಸ್ಥೆಯ ಕೌಶಲ್ಯ ತರಬೇತಿ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಸುಭಾಷ ಮಾನಕರೆ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿ ಆರ್ಬಿಟ್ ಸೇವಾ ಸಂಸ್ಥೆ ವತಿಯಿಂದ





ಎರಡು ತಿಂಗಳ ಟೈಲರಿಂಗ್ ತರಬೇತಿ ನಡೆಸಲಾಗುತಿದೆ. ತಾವುಗಳು ನಿಮ್ಮಲ್ಲಿರುವ ಕೌಶಲ್ಯವನ್ನು ಬಳಸಿಕೊಂಡು ತರಬೇತಿಯ ಸದುಪಯೋಗ ಪಡೆದು ಸ್ವಯಂ ಉದ್ಯೋಗ ಸ್ಥಾಪಿಸಿಕೊಂಡು ಉತ್ತಮ ಬದುಕನ್ನು ಕಟ್ಟಿಕೊಳ್ಳಬೇಕು. ನಿಮ್ಮ ಜೀವನವನ್ನೇ ಬದಲಿಸಿಕೊಳ್ಳುವಂತಹ ಒಳ್ಳೆಯ ಅವಕಾಶ ಇದಾಗಿದೆ ಎಂದು ಹೇಳಿದರು. ಬಳಿಕ ಮಾತನಾಡಿದ ನಾಗಮಾರಪಳ್ಳಿ ಗ್ರಾಮ ಪಂಚಾಯತ ಸದಸ್ಯರಾದ ಶ್ರೀಮತಿ ಮಹಾದೇವಿಯವರು ಈ ರೀತಿಯ ತರಬೇತಿಗಳು ನಡೆಯುವುದರಿಂದ ಗ್ರಾಮೀಣ ಭಾಗದಲ್ಲಿರುವ ಬಡವರಿಗೆ ಮತ್ತು ಮಹಿಳೆಯರಿಗೆ ಮುಂದಿನ ಜೀವನಕ್ಕೆ ಸ್ವಯಂ ಉದ್ಯೋಗ ಸೃಷ್ಟಿ ಮಾಡಿಕೊಳ್ಳಲು ಇಂತಹ ತರಬೇತಿಗಳು ಬಹು ಅವಶ್ಯಕವಾಗಿವೆ. ಈ ತರಬೇತಿ ನಡೆಸಲು ಸಹಾಯ ಮಾಡಿದ ಆರ್ಬಿಟ್ ಸಂಸ್ಥೆಗೆ ಧನ್ಯವಾದಗಳು ತಿಳಿಸಿದರು. ಕಾರ್ಯಕ್ರಮದಲ್ಲಿ ಸುಮಾರು 12 ಜನರು ಭಾಗವಹಿಸಿ.

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ಉಜ್ಜೀವನ ಕಾರ್ಯಕ್ರಮ"

## "ಪ್ರತಿಯೊಬ್ಬರು ಜೀವ ವಿಮೆ ಮಾಡಿಸಿಕೊಳ್ಳಬೇಕು"



ಮೇ 6.2024 ರಂದು ನಂದೂರ್ (ಕೆ) ಗ್ರಾಮದ ಎಸ್‌ಬಿಐ ಬ್ಯಾಂಕ್ ಹಾಗೂ (ಎನ್‌ಪಿಸಿಐ ಲಿಂಕ್) ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ ದ ನಿವೃತ್ತ ಅಧಿಕಾರಿಯಾದ ಗೋಪಾಲ್ ಸರ್ ಅವರು ಜೀವ ವಿಮೆಯ ಕುರಿತು ಮಾಹಿತಿ ನೀಡಿದರು. ಜೀವನವು ಅನಿರೀಕ್ಷಿತತೆಯಿಂದ ಕೂಡಿದೆ, ವ್ಯಕ್ತಿಯ ಜೀವನದ ಯಾವುದೇ ಸಂದರ್ಭದಲ್ಲಿಯಾದರೂ ದುರ್ಘಟನೆಗಳು ಸಂಭವಿಸಬಹುದು, ಆದ್ದರಿಂದ ಕುಟುಂಬವು ಆರ್ಥಿಕವಾಗಿ ಸದೃಢವಾಗಿ ಇರಬೇಕಾದರೆ, ಕುಟುಂಬದ ಮುಖ್ಯಸ್ಥನಿಲ್ಲದೆ ನೆಮ್ಮದಿಯ ಜೀವನ ಸಾಗಿಸಬೇಕಾದರೆ ಪ್ರತಿಯೊಬ್ಬರು



ಜೀವ ವಿಮೆ ಮಾಡಿಸಿಕೊಳ್ಳುವುದು ತುಂಬಾ ಅಗತ್ಯ ಎಂದು ಮಾಹಿತಿ ನೀಡಿದರು. ರೈತರಿಗೆ ಪ್ರಧಾನ ಮಂತ್ರಿ ಕಿಸಾನ್ ಸನ್ಮಾನ ನಿಧಿ ಯೋಜನೆ ಮತ್ತು ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆ ಯಂತಹ ಯಾವುದೇ ಯೋಜನೆಯಿಂದ ಹಣ ತಮ್ಮ ಖಾತೆಗೆ ಬರದೇ ಇದ್ದ ಸಂದರ್ಭದಲ್ಲಿ, ತಮ್ಮ ಹತ್ತಿರದ ಶಾಖೆಗೆ ಭೇಟಿ ನೀಡಿ, ಎನ್‌ಪಿಸಿಐ ಲಿಂಕ್ ಮಾಡಿಸಬೇಕೆಂದು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಶ್ರೀ ಕನಕಾಂಬರಿ ಸ್ವಸಹಾಯ ಸಂಘದ 20 ಜನ ಮಹಿಳೆಯರು ಹಾಗೂ ಗ್ರಾಮದ 60 ಜನ ಭಾಗವಹಿಸಿ ಮಾಹಿತಿ ಪಡೆದುಕೊಂಡರು. ಸೇವಾ ಸಂಗಮ ಸಿಬ್ಬಂದಿ ವತಿಯಿಂದ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜನೆ ಮಾಡಲಾಯಿತು.

## "ಜಲ ರಕ್ಷಣೆ ನಮ್ಮೆಲ್ಲರ ಹೊಣೆ"



ಗ್ರಾಮೀಣ ಭಾಗದಲ್ಲಿ ಜನರ ಜೀವನೋಪಾಯ ಆಧಾರವಾಗಿರುವ ರಾಷ್ಟ್ರೀಯ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯ ಕುರಿತು ನಂದೂರ (ಕೆ) ಮತ್ತು ಸೀತನೂರು ಗ್ರಾಮದಲ್ಲಿ, ಸ್ವಯಂಸೇವಕರಾದ ಆರಿಫ್ ಮತ್ತು ಅಶೋಕ್ ಪೂಜಾರಿಯವರು 115 ಜನ ರೈತರಿಗೆ ಅನುಕೂಲವಾಗುವ ಕ್ರಿಯಾ ಯೋಜನೆಯನ್ನು ನೋಂದಣಿ ಮಾಡಿಸಲಾಯಿತು. ಕ್ರಿಯಾ ಯೋಜನೆಗೆ ಸಂಬಂಧಿಸಿದ ಎನ್.ಎ.ಮ.ಆರ್ ಅನುಮತಿ ಪಡೆದು 112 ಜನ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಲು ಸಹಾಯ ಮಾಡಿದರು. ಒಟ್ಟಾರೆ ಆದಾಯಕ್ಕೆ ಲೆಕ್ಕ ಹಾಕಿದರೆ ಪ್ರತಿಯೊಬ್ಬರ 14



ದಿನದ ಕೂಲಿ. ಪ್ರತಿದಿನ 349 ಸೇರಿ ಒಟ್ಟು ಆದಾಯ 7,42,672 ರೂಪಾಯಿಗಳನ್ನು ಪಡೆದುಕೊಂಡರು. ಕೂಲಿ ಕಾರ್ಮಿಕರು ನಿರ್ವಹಿಸುತ್ತಿರುವ ಈ ಕಾಮಗಾರಿಯು ಮುಂಗಾರಿನ ಸಂದರ್ಭದಲ್ಲಿ ನಡೆಯುತ್ತಿರುವುದರಿಂದ ಅಂತರ್ಜಲ ಕಾಪಾಡಲು ತುಂಬಾ ಸಹಕಾರಿ ಆಗಿದೆ. ಇದರಿಂದ ಮುಂದಿನ ದಿನಗಳಲ್ಲಿ ನೀರಿನ ಕೊರತೆಯನ್ನು ನೀಗಿಸಬಹುದು.

## "ಗ್ರಾಮ ಪಂಚಾಯಿತಿಯಿಂದ ಸೇವಾ ಸಂಗಮಕ್ಕೆ ದೇಣಿಗೆ"



ನಂದಿಕುರ್ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಭೇಟಿಯಾಗಿ, ಸೇವಾ ಸಂಗಮ ಸಂಸ್ಥೆಯು ಆಚರಿಸುತ್ತಿರುವ ಮಹಿಳಾ ದಿನಾಚರಣೆ ಮತ್ತು ಕ್ಯಾನ್ಸರ್ ತಪಾಸಣಾ ಶಿಬಿರದ ಕುರಿತು ಮಾಹಿತಿ ನೀಡಲಾಯಿತು. ಹಲವಾರು ವರ್ಷಗಳಿಂದ ಸೇವಾ ಸಂಗಮ ಸಂಸ್ಥೆ ಮಾಡುತ್ತಿರುವ ಜನಪರ ಕಾರ್ಯಗಳನ್ನು ಪಂಚಾಯತ್ ಆಡಳಿತ ಮಂಡಳಿಯು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಸಂಸ್ಥೆಯ ಉಜ್ಜೀವನ ಕಾರ್ಯ ಚಟುವಟಿಕೆಯು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಉತ್ತಮ ಕಾರ್ಯ ಮಾಡುತ್ತಿದೆ, ಮುಂದಿನ ದಿನಗಳಲ್ಲಿ ಸಂಸ್ಥೆಯು ಇನ್ನೂ ಹೆಚ್ಚಿನ ಸಮಾಜ ಕಾರ್ಯದಲ್ಲಿ ತೊಡಗಲಿ ಎಂದು ಆಶಿಸಿದರು. ಸಂಸ್ಥೆಯು ಮಾಡುತ್ತಿರುವ ಕಾರ್ಯದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿ, 10,000 ರೂಪಾಯಿ ದೇಣಿಗೆಯನ್ನು ಸೇವಾ ಸಂಗಮ ಸಂಸ್ಥೆಗೆ ನೀಡಿದರು.

## "ರೈತರು ಕಡ್ಡಾಯವಾಗಿ ಪಹಣಿ ಜೊತೆಗೆ ಆಧಾರ್ ಲಿಂಕ್ ಮಾಡಿಸುವುದು"



ನಂದಿಕೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಸೀತನೂರು ಗ್ರಾಮದಲ್ಲಿ ಕರ್ನಾಟಕ ಸರಕಾರ ರೈತರಿಗಾಗಿ ಹೊಸ ಆದೇಶ ಹೊರಡಿಸಿದೆ. ಜಮೀನು ಉಳ್ಳ ಪ್ರತಿಯೊಬ್ಬ ರೈತರು ಪಹಣಿ ಜೊತೆಗೆ ಆಧಾರ್ ಕಾರ್ಡ್ ಕಡ್ಡಾಯವಾಗಿ ಲಿಂಕ್ ಮಾಡಿಸಬೇಕು, ಲಿಂಕ್ ಮಾಡಿಸುವುದರಿಂದ ಸರಕಾರದ ಹಲವಾರು ಯೋಜನೆಗಳ ಪ್ರಯೋಜನವನ್ನು ಸುಲಭವಾಗಿ ಪಡೆಯಬಹುದು ಎಂಬುದಾಗಿ ಸೇವಾ ಸಂಗಮ ಸಂಸ್ಥೆಯ ಸಿಬ್ಬಂದಿ ವರ್ಗದವರು ಮಾಹಿತಿ ನೀಡಿದರು. ರೈತ ಸಂಪರ್ಕ ಕೇಂದ್ರದ ಸಹಾಯಕರಾದ ಬಸವರಾಜ್ ಮತ್ತು ಉಜ್ಜೀವನ ಕಾರ್ಯಕ್ರಮದ ಸಿಬ್ಬಂದಿಗಳ ಸಹಾಯದಿಂದ ಉಚಿತವಾಗಿ 52 ರೈತರ ಪಹಣಿ ಮತ್ತು ಆಧಾರ್ ಕಾರ್ಡ್ಗಳನ್ನು ಲಿಂಕ್ ಮಾಡಿಸಲಾಯಿತು. ಈ ಸಂದರ್ಭದಲ್ಲಿ ಒಟ್ಟು 84 ಜನ ರೈತರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.





ಮೇ 2.2024 ರಂದು ನಂದುರ (ಕೆ) ಮತ್ತು ಧರ್ಮಪುರ ಗ್ರಾಮದ ಮಹಿಳಾ ಸ್ವಸಾಯ ಸಂಘಗಳಾದ ಶ್ರೀ ಜ್ಯೋತಿಬಾ ಫುಲೆ ಮಹಿಳಾ ಸ್ವಸಹಾಯ ಸಂಘ ಮತ್ತು ಶ್ರೀ ಕನಕಾಂಬರಿ ಮಹಿಳಾ ಸ್ವಸಾಯ ಸಂಘಕ್ಕೆ ಹೊಸದಾಗಿ ಬ್ಯಾಂಕ್ ಖಾತೆಗಳನ್ನು ಸ್ಥಳೀಯವಾಗಿ ಇರುವ ಆಂಧ್ರ ಬ್ಯಾಂಕಿನಲ್ಲಿ ತೆಗೆದುಕೊಡಲಾಯಿತು. ಸಂಸ್ಥೆಯ ಸಿಬ್ಬಂದಿ ವರ್ಗದವರು ಸ್ವಸಹಾಯ ಸಂಘಕ್ಕೆ ಮಾಡಿರುವ ಈ ಸಹಾಯದ ಕುರಿತು ಧನ್ಯವಾದಗಳು ತಿಳಿಸಿದರು.

# “ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮ”

## “ಕ್ಯಾನ್ಸರ್ ಮುಕ್ತ ಸಮಾಜ ನಿರ್ಮಾಣ-ಸೀತನೂರಿನಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ”



ಮೇ 29.2024 ರಂದು ಕಲ್ಬುರ್ಗಿ ತಾಲೂಕಿನ ಸೀತನೂರು ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಮತ್ತು ಮದರ್ ತೆರೇಸಾ ಚಾರಿಟೇಬಲ್ ಆಸ್ಪತ್ರೆ, ಗ್ರಾಮ ಪಂಚಾಯತ್ ನಂದಿಕೂರ ಇವರ ಸಯುಕ್ತ ಆಶ್ರಯದಲ್ಲಿ ಸೀತನೂರು ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಡಾ. ಗುರುರಾಜ್ ಕುಲಕರ್ಣಿ ಡಾ. ಕ್ರಿಸ್ಟಿನ, ಡಾಕ್ಟರ್ ಅಕ್ಷತಾ, ಹಾಗೂ ಮದರ್ ತೆರೇಸಾ ಚಾರಿಟೇಬಲ್ ಆಸ್ಪತ್ರೆಯ ಡಾ. ಹರ್ಷದ್, ಡಾಕ್ಟರ್ ಅಬಾಜೊದಿನ, ಶ್ರೀಮತಿ ಶ್ವೇತ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಡಾಕ್ಟರ್ ಗುರುರಾಜ್ ಕುಲಕರ್ಣಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಇಂಡಿಯನ್ ಕ್ಯಾನ್ಸರ್ ಸೊಸೈಟಿ ಕರ್ನಾಟಕದಾದ್ಯಂತ ಕ್ಯಾನ್ಸರ್ ರೋಗದ ಕುರಿತು ಜಾಗೃತಿ ಕಾರ್ಯಕ್ರಮಗಳು ಹಾಗೂ ತಪಾಸಣಾ ಶಿಬಿರಗಳನ್ನು ಆಯೋಜಿಸುತ್ತಿದ್ದು ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದರ ಮೂಲಕ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳುವಂತೆ ಕರೆ ನೀಡಿದರು, ಕ್ಯಾನ್ಸರ್ ರೋಗವನ್ನು ಪೂರ್ವದಲ್ಲಿ ಪತ್ತೆ ಹಚ್ಚಿ ಸೂಕ್ತವಾದ ಚಿಕಿತ್ಸೆಯನ್ನು ಪಡೆದುಕೊಂಡು ಸಂಪೂರ್ಣವಾಗಿ ಗುಣಮುಖರಾಗಬಹುದು ಎಂದು ಮಾಹಿತಿ ನೀಡಿದರು.



ಈ ಕಾರ್ಯಕ್ರಮದಲ್ಲಿ ಸೇವಾ ಸಂಗಮ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಸಂಯೋಜಕೀಯಾದ ಶ್ರೀಮತಿ ಶ್ವೇತಾ ಮಾತನಾಡಿದರು. ಸೇವಾ ಸಂಗಮ ಸಂಸ್ಥೆಯು ಕಳೆದ 17 ವರ್ಷಗಳಿಂದ ಮಹಿಳೆಯರಿಗೋಸ್ಕರ, ರೈತರಿಗೋಸ್ಕರ ಕಾರ್ಯನಿರ್ವಹಿಸುತ್ತಾ ಬಂದಿದೆ, ಅದೇ ರೀತಿಯಾಗಿ ಕ್ಯಾನ್ಸರ್ ಎಂಬುದು ದೇಶದಲ್ಲಿ ಕಾಡುತ್ತಿರುವ ಮಹಾಮಾರಿ ರೋಗವಾಗಿದೆ, ಪ್ರತಿಯೊಬ್ಬರು ತಪಾಸಣೆಗೆ ಒಳಪಟ್ಟು ಕ್ಯಾನ್ಸರ್ ರೋಗದ ಪರೀಕ್ಷೆ ಮಾಡಿಕೊಳ್ಳುವಂತೆ ಗ್ರಾಮಸ್ಥರನ್ನು ಕೋರಿದರು. ಈ ಶಿಬಿರದಲ್ಲಿ ನಂದಿಕೂರು ಗ್ರಾಮದ ಪಂಚಾಯತ್ ಆಡಳಿತ ವರ್ಗ, ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ತಂಡ, ಮದರ್ ತೆರೇಸಾ ಚಾರಿಟೇಬಲ್ ಆಸ್ಪತ್ರೆಯ ಸಿಬ್ಬಂದಿ ವರ್ಗ, ಹೊನ್ನ ಕಿರಣಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗ, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು, ಸೇವಾ ಸಂಗಮ ಸಂಸ್ಥೆಯ ಸಿಬ್ಬಂದಿ ವರ್ಗದವರು ಮತ್ತು ಗ್ರಾಮಸ್ಥರು ಭಾಗವಹಿಸಿದರು. ಶಿಬಿರದಲ್ಲಿ ಒಟ್ಟು 86 ಜನ ಭಾಗವಹಿಸಿ ಶಿಬಿರದ ಸದುಪಯೋಗ ಪಡೆದುಕೊಂಡರು.



# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ

## “ಪೌಷ್ಟಿಕಾಂಶ ಆಹಾರದ ಕುರಿತು ಮಾಹಿತಿ”



ಮೇ 6.2024 ರಂದು ಕಲ್ಬುರ್ಗಿ ತಾಲೂಕಿನ ಕಡಕ್‌ಪುರ್ ಶಹಬಜಾರ್ ಅಂಗನವಾಡಿ ಕೇಂದ್ರದಲ್ಲಿ ಸೇವಾ ಸಂಗಮ ಸಂಸ್ಥೆಯ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಹಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಹಾಗೂ ಪೌಷ್ಟಿಕಾಂಶ ಆಹಾರದ ಕುರಿತು ಮಾಹಿತಿ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳಿಗೆ ಮೂರು ತಿಂಗಳಿಗೆ ಕತ್ತು ನಿಂತಿರಬೇಕು ಒಂದು ವೇಳೆ ನಿಲ್ಲದೆ ಇದ್ದರೆ, ಮಗುವಿಗೆ ನಡೆಯುವುದಕ್ಕೆ ಬಾರದಿದ್ದರೆ ಯಾವುದರಲ್ಲಿ ಕುಂಠಿತ ಹೊಂದಿದೆ ಎಂಬುದರ ಕುರಿತು ವಿಶ್ಲೇಷಣೆ ಮಾಡಿ, ನ್ಯೂನತೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಮನೆಯಲ್ಲೇ ಮಾಡಿಸುವ ಮೂಲಕ ಮಗುವಿನಲ್ಲಿ ಬದಲಾವಣೆ ತರಲಾಗುವುದು. ಜೊತೆಗೆ ಗರ್ಭಿಣಿ ಬಾಣಂತಿಯರು ಪೌಷ್ಟಿಕಾಂಶಯುಕ್ತ ಆಹಾರವನ್ನು ಸೇವಿಸುವ ಮೂಲಕ ತಮ್ಮ ಆರೋಗ್ಯವನ್ನು ಉತ್ತಮ ರೀತಿಯಲ್ಲಿ ಕಾಪಾಡಿಕೊಳ್ಳಬಹುದು ಎಂದು ಯೋಜನೆಯ ನಿರ್ದೇಶಕಿಯಾದ ಶ್ರೀಮತಿ ಶ್ವೇತಾ ಮತ್ತು ಕಾರ್ಯಕರ್ತರಾದ ಲಕ್ಷ್ಮಣರಾವ್ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 15 ಜನ ಮಹಿಳೆಯರು, ಮಕ್ಕಳು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಟೆಂಟ್ ಅರಿವಿನ ಕಾರ್ಯಕ್ರಮ”



ಮೇ 17. 2024 ರಂದು ಕಲ್ಬುರ್ಗಿ ತಾಲೂಕಿನ ಸೂಪರ್ ಮಾರ್ಕೆಟ್ ಬಸ್ ನಿಲ್ದಾಣದಲ್ಲಿ ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಟೆಂಟ್ ಅರಿವಿನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ವಿವಿಧ ಭಾಗದಿಂದ ಕಲ್ಬುರ್ಗಿ ಪಟ್ಟಣದ ತರಕಾರಿ ಮಾರುಕಟ್ಟೆಗೆ ಬರುವ ಸಾರ್ವಜನಿಕರಿಗೆ 0–6 ವರ್ಷದೊಳಗಿನ ಬೆಳವಣಿಯಲ್ಲಿ ಕುಂಟಿತ ಹೊಂದಿರುವ ಮಕ್ಕಳನ್ನು ಕಂಡು ಬಂದಲ್ಲಿ ಅಥವಾ ತಮ್ಮ ಸಮುದಾಯದಲ್ಲಿ ಇಂಥ ಮಕ್ಕಳು ಕಂಡು ಬಂದಲ್ಲಿ ಸೇವಾ ಸಂಗಮ ಸಂಸ್ಥೆಗೆ ಮಾಹಿತಿ ನೀಡುವ ಮೂಲಕ ಸೂಕ್ತ ಮಾರ್ಗದರ್ಶನ ಮತ್ತು ಸಲಹೆ ಪಡೆಯಬಹುದು. ಇಂತಹ ಮಕ್ಕಳು ಕಂಡುಬಂದಲ್ಲಿ ಸಂಸ್ಥೆಯ ವತಿಯಿಂದ ವಿಶ್ಲೇಷಣೆ ಮಾಡಿ ಉತ್ತೇಜಕ ಚಟುವಟಿಕೆ ಮಾಡಿಸುವುದರ ಮೂಲಕ ಆರೋಗ್ಯದಲ್ಲಿ ಸುಧಾರಣೆ ಮೂಡಿಸಲಾಗುತ್ತದೆ ಎಂದು ಸಂಸ್ಥೆಯ ಕಾರ್ಯಕರ್ತರಾದ ಜಗದೇವಿಯವರು ಸಾರ್ವಜನಿಕರಿಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ 65 ಜನರಿಗೆ ಮಾಹಿತಿ ನೀಡಲಾಯಿತು ಸಂಸ್ಥೆಯ ಕಾರ್ಯಕರ್ತರಾದ ಲಕ್ಷ್ಮಣ್, ದ್ರಾಕ್ಷಿಣಿ, ಕುಮಾರಿ ಲಕ್ಷ್ಮಿ ಮತ್ತು ರಾಜಕುಮಾರ್ ಭಾಗವಹಿಸಿದ್ದರು.

## “ಬೆಳವಣಿಗೆ ಕುಂಠಿತವಿರುವ ಮಗುವಿಗೆ ಚಟುವಟಿಕೆ”



ಮೇ 17.2024 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜೀ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ, ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆಯ ಅಡಿಯಲ್ಲಿ, ಕಲ್ಬುರ್ಗಿ ಪಟ್ಟಣದ ಅಂಬಿಕಾ ನಗರದಲ್ಲಿ ಬೆಳವಣಿಗೆ ಕುಂಠಿತವಿರುವ ಮಗುವಿನ ಮನೆಗೆ ಭೇಟಿ ನೀಡಿ, ಮನೆಯಲ್ಲಿ ಇರುವಂತ ಸ್ಥಳೀಯ ಸಾಮಗ್ರಿಗಳನ್ನು ಬಳಸಿಕೊಂಡು ಮಗುವಿಗೆ ಚಟುವಟಿಕೆ ಮಾಡಿಸಲಾಯಿತು. ಸೇವಾ ಸಂಗಮ ಸಂಸ್ಥೆಯ ವತಿಯಿಂದ ಕಾರ್ಯಕರ್ತೆಯಾದ ಕುಮಾರಿ ಅನಿತಾ ರವರು ವಾಕ್ ಚಟುವಟಿಕೆ, ಬ್ಲೋಯಿಂಗ್ ಚಟುವಟಿಕೆ, ಬಣ್ಣಗಳನ್ನು ಗುರುತಿಸುವಿಕೆ ಚಟುವಟಿಕೆ ಮಾಡಿಸಿದರು. ಕಾರ್ಯಕರ್ತರು ಹೇಳಿಕೊಟ್ಟಂತಹ ಪ್ರತಿಯೊಂದು ಚಟುವಟಿಕೆಯು ಪೋಷಕರು ನಿಯಮಿತವಾಗಿ ಮಾಡಬೇಕು ಇದರಿಂದ ಮಗುವಿನಲ್ಲಿ ಗಮನಾರ್ಹವಾದ ಬದಲಾವಣೆ ಕಾಣಬಹುದು ಎಂದು ಪೋಷಕರಿಗೆ ಮಾಹಿತಿ ನೀಡಿದರು. ನಿರಂತರ ಚಟುವಟಿಕೆ ಮಾಡಿಸುತ್ತಿರುವುದರಿಂದ ಸದ್ಯ ಮಗು ಎರಡು ಶಬ್ದಗಳ ಪದಗಳನ್ನು ಉಚ್ಚಾರ ಮಾಡುತ್ತಿದೆ. ಈ ಬದಲಾವಣೆ ಕಂಡ ಪೋಷಕರು ಸಂಸ್ಥೆಯ ಪ್ರಯತ್ನಕ್ಕೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

## ಮನೆಯೇ ಮೊದಲ ಪಾಠಶಾಲೆ ಹೆತ್ತ ತಾಯಿಯೇ ಮೊದಲ ಗುರು.



ಕಲ್ಬುರ್ಗಿ. ತಾಲೂಕಿನ ಶರಣಸಿರಸಿಗಿ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯುಕ್ತಶ್ರಯದಲ್ಲಿ, ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ತಾಯಂದಿರನ್ನು ಉದ್ದೇಶಿಸಿ ಮಾತನಾಡಿದ ಕುಮಾರಿ ಲಕ್ಷ್ಮಿ ಪಂಚಾಕ್ಷರಿ, ಮಕ್ಕಳ ಲಾಲನೆ–ಪಾಲನೆಯಲ್ಲಿ ತಾಯಂದಿರ ಪಾತ್ರ ತುಂಬಾ ಮಹತ್ವದಾಗಿದೆ, ಮಕ್ಕಳ ಬೆಳವಣಿಗೆಯ ಪ್ರತಿಯೊಂದು ಹಂತವನ್ನು ತಾಯಿಯು ಗುರುತಿಸುವ ಮೂಲಕ ತನ್ನ ಮಗು ಯಾವ ಹಂತದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಹೊಂದುತ್ತಿದೆ ಎಂಬುದನ್ನು ಗಮನಿಸಬೇಕು, ಇದರಿಂದ ಮುಂದಿನ ದಿನಗಳಲ್ಲಿ ಆಗುವ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸಲಾಯಿತು. ಮಗುವಿನ ಬೆಳವಣಿಗೆಯ ಹಂತಗಳು ಕುಂಠಿತಗೊಂಡಿದೆ ಎಂದು ಅರಿವಿಗೆ ಬಂದ ಕೂಡಲೇ, ಜಾಗ್ರತರಾಗಿ ಸೂಕ್ತ ಚಿಕಿತ್ಸೆ ಕೊಡಿಸುವ ಕಡೆ ಗಮನಹರಿಸುವುದು ತುಂಬಾ ಅವಶ್ಯಕ; ಇದರಿಂದ ಮಗು ತನ್ನ ಬಾಲ್ಯದ ಜೀವನವು ಸಂತೋಷದಿಂದ ಕಳೆಯಲು ನೆರವಾಗುತ್ತದೆ. ತಾಯಿಯು ಮನೆಯಲ್ಲಿ ಪ್ರೀತಿ, ವಿಶ್ವಾಸ, ಮಮತೆಯ ವಾತಾವರಣ ನಿರ್ಮಾಣ ಮಾಡುವುದರಿಂದ ಮಗುವಿನಲ್ಲಿ ಇರುವ ನ್ಯೂನತೆಯ ಪ್ರಮಾಣವನ್ನು ತಕ್ಕಮಟ್ಟಿಗೆ ಕಡಿಮೆ ಮಾಡಬಹುದು. ಸೇವಾ ಸಂಗಮ ಸಂಸ್ಥೆ ಬೆಳವಣಿಗೆಯಲ್ಲಿ ಕುಂಟಿತವಿರುವ ಮಕ್ಕಳನ್ನು ಶೀಘ್ರವಾಗಿ ಪತ್ತೆ ಹಚ್ಚುವ ಮೂಲಕ ಮಕ್ಕಳಲ್ಲಿ ಇರುವ ನ್ಯೂನತೆಗೆ ತಕ್ಕಂತೆ ಆರಂಭಿಕ ಶಿಕ್ಷಣವನ್ನು ನೀಡುವ ಮೂಲಕ ಸಮಾಜವನ್ನು ನಿರ್ಮಾಣ ಮಾಡುವುದೇ ಸೇವಾ ಸಂಗಮ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ 12 ಜನ ತಾಯಂದಿರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

# ಸತತ ಪ್ರಯತ್ನವೇ ಯಶಸ್ಸಿನ ಮೂಲ ಮಂತ್ರ.



ಕಲ್ಬುರ್ಗಿ. ಸೇವಾ ಸಂಗಮ ಸಂಸ್ಥೆಯ, ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ, ರಾಜಕುಮಾರ್ ಎಂಬ ನಾನು ಸುಮಾರು 10 ತಿಂಗಳಿನಿಂದ ಕಾರ್ಯಕರ್ತನಾಗಿ ಸೇರಿ ಸೇವೆ ಸಲ್ಲಿಸುತ್ತಿದ್ದೇನೆ. ಈ ಯೋಜನೆಯ ಮುಖ್ಯ ಉದ್ದೇಶವೇನೆಂದರೆ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಬೆಳವಣಿಗೆ ಪೂರ್ವದಲ್ಲಿಯೇ ನ್ಯೂನತೆಯನ್ನು ಗುರುತಿಸುವ ಮೂಲಕ, ಆ ನ್ಯೂನತೆಯನ್ನು ಹೋಗಲಾಡಿಸಲು ಚಟುವಟಿಕೆಯನ್ನು ನೀಡಿ, ಮಗುವಿನಲ್ಲಿರುವ ನ್ಯೂನತೆಯನ್ನು ಮುಕ್ತಗೊಳಿಸುವುದೇ ಆಗಿದೆ. ಫರಹತಾಬಾದ್ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುವ 12 ಗ್ರಾಮಗಳಲ್ಲಿ ನಾನು ಕಾರ್ಯನಿರ್ವಹಿಸುತ್ತಿದ್ದು. ನ್ಯೂನತೆಯ ಮಕ್ಕಳನ್ನು ಗುರುತಿಸಿ ಅವರಿಗೆ ವಿವಿಧ ಚಟುವಟಿಕೆಗಳನ್ನು ಮಾಡಿಸುವುದು ನನ್ನ ಪಾಲಿಗೆ ತುಂಬಾ ಸವಾಲಿನ ಕೆಲಸವಾಗಿತ್ತು. ಕಾರಣ ಮಕ್ಕಳು ಹಾಗೂ ಪೋಷಕರು ಸರಿಯಾಗಿ ಸ್ಪಂದಿಸದೆ ಇರುವುದರಿಂದ ಮಕ್ಕಳನ್ನು ಸಂಭಾಳಿಸುವುದು ತುಂಬಾ ಕಷ್ಟದ ಕೆಲಸವಾಗಿತ್ತು. ನಿಕಿತ (ಹೆಸರು ಬದಲಾಯಿಸಲಾಗಿದೆ), ತಂದೆ ಶರಣು, ತಾಯಿ ಅಂಬಿಕ. ವಯಸ್ಸು 5.5 ವರ್ಷ, ಗ್ರಾಮ ಹಾಗರ್‌ಗುಂಡಗಿ, ಈ ಮಗುವಿಗೆ ಮಾತನಾಡುವ ಸಮಸ್ಯೆ ಇತ್ತು, ನಾವು ಹೇಳಿಕೊಟ್ಟ ಶಬ್ದಗಳನ್ನು ಉಚ್ಚಾರಣೆ ಮಾಡುತ್ತಿರಲಿಲ್ಲ, ಪ್ರಾರಂಭದಲ್ಲಿ ಮಗುವಿನ ವಿಶ್ವಾಸ ಗಳಿಸಲು ಕಷ್ಟವಾಯಿತು, ಆದರೆ ನಾನು ಪಡೆದಿರುವ ತರಬೇತಿಯ ಕೌಶಲ್ಯಗಳನ್ನು ಬಳಸುವ ಮೂಲಕ ನಿಧಾನವಾಗಿ ಮಗುವಿಗೆ ಆಕರ್ಷಣೀಯ ಚಟುವಟಿಕೆಗಳನ್ನು ಮಾಡಿಸುವ ಮೂಲಕ ಮಗುವಿನ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾದೆ. ನಂತರದ ದಿನಗಳಲ್ಲಿ ಪೋಷಕರಿಗೆ ಹೇಳಿಕೊಟ್ಟಂತ ಚಟುವಟಿಕೆಗಳು ನಿರಂತರವಾಗಿ ಮಗುವಿಗೆ ಮಾಡಿಸುತ್ತಿರುವುದರಿಂದ ಸದ್ಯ ಮಗು ಎರಡು ಅಕ್ಷರಗಳ ಶಬ್ದಗಳನ್ನು ಉಚ್ಚರಿಸಲು ಶಕ್ತವಾಗಿದೆ. ಮಗುವಿನಲ್ಲಿ ಇಂಥ ಗುರುತರವಾದ ಬದಲಾವಣೆ ಬರಬೇಕಾದರೆ ಪೋಷಕರ ಹಾಗೂ ಸಂಸ್ಥೆಯ ನಿರಂತರ ಪ್ರಯತ್ನ ಎಂದು ಹೇಳಬಹುದು. ನಾನು ಈ ಸಂದರ್ಭದಲ್ಲಿ ಹೇಳಲು ಬಯಸುವುದೇನೆಂದರೆ, ಪ್ರಾರಂಭದಲ್ಲಿ ಯಾವುದೇ ಕೆಲಸವಾದರೂ ಕಷ್ಟವೆನಿಸಬಹುದು ಆದರೆ ಅದನ್ನು ಮೆಟ್ಟಿ ನಿಂತಾಗ ಯಶಸ್ಸು ಖಂಡಿತವಾಗಿಯೂ ದಕ್ಕುತ್ತದೆ.

## ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯ



**ಆರ್ಬಿಟ್ ಸಂಸ್ಥೆಯಲ್ಲಿ ಮಾನಸಿಕ ಅಸ್ವಸ್ಥರಿಗೆ ಹಾಗೂ ಪೋಷಕರಿಗೆ ವಸತಿ ಸಹಿತ ಎರಡು ದಿವಸದ ತರಬೇತಿ ಕಾರ್ಯಗಾರ**



**ಕ್ಯಾನ್ಸರ್‌ನಿಂದ ಜೀವ ರಕ್ಷಿಸಿಕೊಳ್ಳಲು ಆದ್ಯತೆ ನೀಡಿ–ಡಾ.ಗುರುರಾಜ್ ಕುಲಕರ್ಣಿ**



ಸಿತನೂರಿನಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ

**ಕ್ಯಾನ್ಸರ್‌ನಿಂದ ಜೀವ ರಕ್ಷಿಸಿಕೊಳ್ಳಲು ಆದ್ಯತೆ ನೀಡಿ: ಡಾ. ಕುಲಕರ್ಣಿ**



VIJAYAVANI KALABURAGI | ವಿಜಯವಾಣಿ | ಗುರುವಾರ 30 MAY

**ಶಿಬಿರ ಉದ್ಘಾಟನೆ**

ಔರಾದ್ ತಾಲೂಕಿನ ನಾಗಮಾರಪಳ್ಳಿಯಲ್ಲಿ ಆರ್ಬಿಟ್ ಸಂಸ್ಥೆ, ಇಂಡಿಯನ್ ಕ್ಯಾನ್ಸರ್ ಸೊಸೈಟಿ ಮತ್ತು ಮದರ್ ತೆರೇಸಾ ಶಿಕ್ಷಣ ಸಂಸ್ಥೆ ಸಹಯೋಗದಡಿ ಮಂಗಳವಾರ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಇಂಡಿಯನ್ ಕ್ಯಾನ್ಸರ್ ಸೊಸೈಟಿ ಕಲಬುರಗಿ ವಿಭಾಗದ ಮುಖ್ಯಸ್ಥ ಗುರುರಾಜ ಕುಲಕರ್ಣಿ ಉದ್ಘಾಟಿಸಿದರು. ಗ್ರಾಪಂ ಸದಸ್ಯ ಸತೀಶ ಪಾಟೀಲ್, ಶಿವು ಪಾಟೀಲ್, ಸಿಸ್ಟರ್ ಲೀನೆಟ್, ಜೀವನ, ಸುಭಾಷ ಮಾನಕರ, ಯೋಹಾನ್, ಸುಕ್ಕು ಇದ್ದರು.

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

## TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್
ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಮಗು
ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

Name : Sevasangama Development Society
Account No : 16040100022902
IFSC Code : FDRL0001604
Bank : Federal Bank
Branch : Super Market Kalaburagi

Fr. Victor Anil Vas
Director, Seva Sangama & ORBIT

Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in